ಕ್ರೆಡಿಟ್ ಕಾರ್ಡ್ ನಿಯಮಗಳು

1	ನಿಮಗೆ ಸರಿ ಎನಿಸುವ ಉತ್ಪನ್ನವನ್ನು ಆರಿಸುವುದು	2
2	ಕ್ರೆಡಿಟ್ ಕಾರ್ಡುಗಳು	2
3	ಸಾಲದ ಮಿತಿ	4
4	ಮುಂಗಡ ನಗದು	5
5	ಮೊತ್ತದ ವರ್ಗಾವಣೆ	5
6	ಬಡ್ಡಿ, ಶುಲ್ಕಗಳು ಮತ್ತು ವೆಚ್ಚಗಳು	6
7	ಹೊಣೆಗಾರಿಕೆ	6
8	ನಿಮ್ಮ ಖಾತೆಗೆ ನೀಡುವ ಹೆಚ್ಚುವರಿ ಸೇವೆಗಳು	8
9	ಪಾವತಿಗಳು	9
10	ವಿದೇಶಿ ವಹಿವಾಟುಗಳು	11
11	ರದ್ದತಿ ಮತ್ತು ಮುಕ್ತಾಯ	12
12	ವ್ಯತ್ಯಯ	13
13	ಸಂದೇಹಾಸ್ಪದ ವಹಿವಾಟುಗಳು	14
14	ಕಾರ್ಡುಗಳ ನವೀಕರಣ ಮತ್ತು ಬದಲಾವಣೆ	14
15	ನೀವು ವಿದೇಶಿ ಪ್ರಜೆಯಾಗಿದ್ದರೆ	15
16	ಪದಗಳ ಅರ್ಥ	15

ಪ್ರಮುಖ ಸೂಚನೆ

ಈ ದಾಖಲೆಯನ್ನು ನೀವು ಓದಬೇಕು. ಇದು ನಿಮಗೆ ಯಾವೆಲ್ಲ ನಿಯಮಗಳು ಮತ್ತು ಷರತ್ತುಗಳ ಮೇಲೆ ಕ್ರೆಡಿಟ್ ಕಾರ್ಡ್ ಉತ್ಪನ್ನಗಳನ್ನು ಒದಗಿಸಲು ನಾವು ಒಪ್ಪಿಕೊಂಡಿದ್ದೇವೆ ಎಂಬುದನ್ನು ಸ್ಪಷ್ಟಪಡಿಸುತ್ತದೆ. ಇದನ್ನು ನೀವು ಗ್ರಾಹಕ ನಿಯಮಗಳು, ಉತ್ಪನ್ನದ ಬ್ರೋಶರ್, ಮತ್ತು ನಮ್ಮ ಬ್ಯಾಂಕಿಂಗ್ ಒಪ್ಪಂದವೆನಿಸುವ ಇತರ ಯಾವುದೇ ದಾಖಲೆಯ ಸಂಯೋಗದೊಂದಿಗೆ ಓದಬೇಕು. ಈ ನಿಯಮಗಳು ಮತ್ತು ನಮ್ಮ ಗ್ರಾಹಕ ನಿಯಮಗಳ ನಡುವೆ ಯಾವುದೇ ಅಸಂಗತತೆ ಉಂಟಾದ ಪಕ್ಷದಲ್ಲಿ ಈ ನಿಯಮಗಳು ಉಳಿದು ಕೊಳ್ಳುತ್ತವೆ. ನೀವು ನಮ್ಮೊಂದಿಗೆ ಹೊಂದಿರುವ ಯಾವುದೇ ಪ್ರಸ್ತುತ ಕ್ರೆಡಿಟ್ ಕಾರ್ಡ್ ಉತ್ಪನ್ನಗಳಿಗೆ ಈ ನಿಯಮಗಳು ಅನ್ವಯವಾಗುವುದಿಲ್ಲ ಹಾಗೂ ಅವುಗಳು ಪ್ರತ್ಯೇಕ ನಿಯಮಗಳು ಮತ್ತು ಷರತ್ತುಗಳಿಗೆ ಒಳಪಟ್ಟಿರುತ್ತವೆ.

ಪ್ರಮುಖ ಪದಗಳು

ಪ್ರಮುಖ ಪದಗಳ ಅರ್ಥವನ್ನು ಈ ರೀತಿ ಮುದ್ರಿಸಲಾಗಿದೆ ಹಾಗೂ ನಮ್ಮ ಬ್ಯಾಂಕಿಂಗ್ ಒಪ್ಪಂದದಲ್ಲಿ ಬಳಸಲಾದ ಇತರ ಪದಗಳನ್ನು ನಮ್ಮ ಗ್ರಾಹಕ ನಿಯಮಗಳಲ್ಲಿ ವಿವರಿಸಲಾಗಿದೆ. ಈ ನಿಯಮಗಳಲ್ಲಿ ಉಲ್ಲೇಖಿಸಲಾಗಿರುವ ಉತ್ಪನ್ನಗಳಿಗೆ ಅನ್ವಯವಾಗುವ ಕೆಲವು ಹೆಚ್ಚುವರಿ ಪ್ರಮುಖ ಪದಗಳನ್ನು ಈ ನಿಯಮಗಳ ಕೊನೆಗೆ ವಿವರಿಸಲಾಗಿದೆ.

1 ನಿಮಗೆ ಸರಿ ಎನಿಸುವ ಉತ್ಪನ್ನವನ್ನು ಆರಿಸುವುದು

ನಿಮ್ಮ ವೈಯಕ್ತಿಕ ಬ್ಯಾಂಕಿಂಗ್ ಅಗತ್ಯತೆಗಳಿಗೆ ಸರಿ ಹೊಂದುವುದಕ್ಕಾಗಿ ವಿನ್ಯಾಸಗೊಳಿಸಲಾದ ವಿವಿಧ ಕ್ರೆಡಿಟ್ ಕಾರ್ಡ್ ಉತ್ಪನ್ನಗಳನ್ನು ನಾವು ನಿಮಗೆ ಒದಗಿಸುತ್ತೇವೆ. ನೀವು ಒದಗಿಸುವ ಕ್ರೆಡಿಟ್ ಕಾರ್ಡುಗಳ ನಿರ್ದಿಷ್ಟ ಪ್ರಕಾರಗಳನ್ನು ಉತ್ಪನ್ನದ ಬ್ರೋಶರ್ ನಲ್ಲಿ ನಿರ್ದಿಷ್ಟಪಡಿಸಲಾಗಿದೆ. ಯಾವುದೇ ಕ್ರೆಡಿಟ್ ಕಾರ್ಡುಗಳ ಯಾವುದೇ ಗುಣಲಕ್ಷಣಗಳು ಅಥವಾ ಅನ್ವಯವಾಗುವ ನಿಯಮಗಳನ್ನು ನಾವು ನಿಮಗೆ ವಿವರಿಸಬೇಕೆಂದು ನೀವು ಬಯಸಿದಲ್ಲಿ ದಯವಿಟ್ಟು ನಮ್ಮನ್ನು ಸಂಪರ್ಕಿಸಿ.

2 ಕ್ರೆಡಿಟ್ ಕಾರ್ಡುಗಳು

ಕ್ರೆಡಿಟ್ ಕಾರ್ಡುಗಳ ವಿತರಣೆ

2.1 ನಾವು ನಿಮಗೆ ಹಾಗೂ, ನಿಮ್ಮ ವಿನಂತಿಯ ಮೇರೆಗೆ, ಪ್ರತಿ ಪೂರಕ ಕಾರ್ಡುದಾರರಿಗೆ ಕ್ರೆಡಿಟ್ ಕಾರ್ಡನ್ನು ನೀಡಬಹುದು.

2.2 ಪೂರಕ ಕ್ರೆಡಿಟ್ ಕಾರ್ಡನ್ನು ಜಸ್ಟ್‌ವನ್ ಕಾರ್ಡ್ ಮೇಲೆ ವಿತರಿಸಲಾಗುವುದಿಲ್ಲ ಎಂಬುದನ್ನು ದಯವಿಟ್ಟು ಗಮನಿಸಿ.

ಸಂಗ್ರಹಣೆ

2.3 ಕ್ರೆಡಿಟ್ ಕಾರ್ಡನ್ನು (ಮತ್ತು ಯಾವುದೇ ಬದಲಿ ಕ್ರೆಡಿಟ್ ಕಾರ್ಡ್) ನೀವು ಕೊನೆಯದಾಗಿ ನಮಗೆ ತಿಳಿಸಿದ ನಿಮ್ಮ ವಿಳಾಸಕ್ಕೆ ಕಳುಹಿಸುತ್ತೇವೆ.

ಸಕ್ರಿಯಗೊಳಿಸುವ ಕಾರ್ಯವಿಧಾನಗಳು

2.4 ಪ್ರತಿ ಕಾರ್ಡುದಾರನು, ಕಾಲದಿಂದ ಕಾಲಕ್ಕೆ ತಿಳಿಸಿದ ಸಕ್ರಿಯಗೊಳಿಸುವಿಕೆ ಕಾರ್ಯವಿಧಾನವನ್ನು ಅನುಸರಿಸಬೇಕು.

ಕ್ರೆಡಿಟ್ ಕಾರ್ಡನ್ನು ಬಳಸುವುದು

2.5 ನೀವು ಮೊದಲಿಗೆ ಕ್ರೆಡಿಟ್ ಕಾರ್ಡನ್ನು ಬಳಸಿದಾಗ ನಮ್ಮ ಬ್ಯಾಂಕಿಂಗ್ ಒಪ್ಪಂದದ ನಿಯಮಗಳನ್ನು ನೀವು ಒಪ್ಪಿಕೊಳ್ಳುತ್ತೀರಿ.

ನಮ್ಮ ಬ್ಯಾಂಕಿಂಗ್ ಒಪ್ಪಂದದ ನಿಯಮಗಳು ಕ್ರೆಡಿಟ್ ಕಾರ್ಡಿನ ಪ್ರತಿ ಬಳಕೆಗೆ ಅನ್ವಯವಾಗುತ್ತವೆ. ಒಂದು ವೇಳೆ ಕಾರ್ಡುದಾರನು ಈ ನಿಯಮಗಳನ್ನು ಒಪ್ಪದೆ ಇದ್ದರೆ ಅವರು ಕ್ರೆಡಿಟ್ ಕಾರ್ಡಿಗೆ ಸಹಿ ಹಾಕಬಾರದು ಅಥವಾ ಯಾವುದೇ ವಹಿವಾಟನ್ನು ನಡೆಸಬಾರದು.

2.6 ಕ್ರೆಡಿಟ್ ಕಾರ್ಡನ್ನು ಯಾರಿಗೆ ವಿತರಿಸಲಾಗಿದೆಯೋ ಅವರು ಮಾತ್ರವೇ ಅದನ್ನು ಬಳಸುತ್ತಿದ್ದಾರೆ ಎಂಬುದನ್ನು ನೀವು ಖಚಿತಪಡಿಸಬೇಕು. ಕ್ರೆಡಿಟ್ ಕಾರ್ಡನ್ನು ನಿಯಂತ್ರಕ ಮಾರ್ಗಸೂಚಿಗಳು, ಬ್ಯಾಂಕಿನ ನಿಯಮಗಳು ಮತ್ತು ಷರತ್ತುಗಳು ಮತ್ತು ಅನ್ವಯವಾಗುವ ನೀತಿಗಳಿಗೆ ಅನುಗುಣವಾಗಿ ಬಳಸಲಾಗುತ್ತಿದೆ ಎಂಬುದನ್ನು ಖಚಿತಪಡಿಸುವುದಕ್ಕಾಗಿ, ಒಂದು ಲೆಕ್ಕಪಟ್ಟಿ ಚಕ್ರದಲ್ಲಿ ಮಂಜೂರಾದ ಮೊತ್ತಕ್ಕಿಂತ ಮಿಗಿಲಾಗಿ ಕ್ರೆಡಿಟ್ ಕಾರ್ಡ್ ಮಿತಿಯ ಅಧಿಕ ಬಳಕೆ, ಕೆಲವು ಆಯ್ದ ವ್ಯಾಪಾರಿಗಳಲ್ಲಿ ಅಸಾಮಾನ್ಯ ಅಥವಾ ಹೆಚ್ಚುವರಿ ಬಳಕೆ, ವ್ಯಾಪಾರಿಗಳೊಂದಿಗೆ ಸಂಭಾವ್ಯ ಒಳಸಂಚು ಮತ್ತು/ಅಥವಾ ವೈಯಕ್ತಿಕವಲ್ಲದ/ ವ್ಯಾಪಾರಕ್ಕೆ ಸಂಬಂಧಿಸಿದ ಅಗತ್ಯತೆಗಳಿಗೆ ಬಳಕೆ, ನ್ಯಾಯವಲ್ಲದ ರಿವಾರ್ಡ್ ಪಾಯಿಂಟುಗಳು/ ಕ್ಯಾಶ್ ಬ್ಯಾಕ್/ ಇತರವುಗಳೊಂದಿಗೆ ಇತರ ಸವಲತ್ತುಗಳ ಕ್ರೋಢೀಕರಣಕ್ಕಾಗಿ ಗುಣಲಕ್ಷಣಗಳು/ ಕೊಡುಗೆಗಳ/ ಪ್ರೋಗ್ರಾಂ ನ ಅಧಿಕ ಬಳಕೆ/ ದುರ್ಬಳಕೆ ನಡೆಯುತ್ತಿದೆಯೇ ಎಂಬುದನ್ನು ಗುರುತಿಸುವುದಕ್ಕಾಗಿ ಕ್ರೆಡಿಟ್ ಕಾರ್ಡ್ ಬಳಕೆಯ ಮೇಲೆ ಕಾಲ ಕಾಲಕ್ಕೆ ತಪಾಸಣೆಗಳನ್ನು ನಡೆಸಲು ಬ್ಯಾಂಕು ಅಧಿಕಾರವನ್ನು ಹೊಂದಿದೆ. ಬಳಕೆಯ ಮಾದರಿಯನ್ನು ಆಧರಿಸಿ, ಇವುಗಳಲ್ಲಿ ಯಾವುದಾದರೂ ಒಂದರ ಕುರಿತು ಬ್ಯಾಂಕು ಸಂಶಯಪಟ್ಟಲ್ಲಿ, ಬ್ಯಾಂಕು ಕ್ರೆಡಿಟ್ ಕಾರ್ಡಿನ ಮೇಲೆ ನಿರ್ಬಂಧದ ಕ್ರಮವನ್ನು ತೆಗೆದುಕೊಳ್ಳಬಹುದು. ಅಂತಹ ಕ್ರಮವು ತಕ್ಷಣಕ್ಕೆ ಜಾರಿಗೆ ಬರುವಂತೆ, ಗುಣಲಕ್ಷಣಗಳು/ ಸವಲತ್ತುಗಳ ಹಿಂಪಡೆತ ಹಾಗೂ ಕ್ರೆಡಿಟ್ ಕಾರ್ಡಿನ ಸಂಪೂರ್ಣ ರದ್ದತಿಯನ್ನು ಒಳಗೊಂಡಿರಬಹುದು ಹಾಗೂ ಇಷ್ಟಕ್ಕೆ ಸೀಮಿತವಾಗದೆಯೂ ಇರಬಹುದು. ಒಂದು ವೇಳೆ ಬ್ಯಾಂಕು ಅಂತಹ ಕ್ರಮವನ್ನು ತೆಗೆದುಕೊಂಡಲ್ಲಿ, ಬ್ಯಾಂಕು ಯೋಗ್ಯವೆಂದು ಪರಿಗಣಿಸಿದಂತೆ, ಕ್ರೆಡಿಟ್ ಕಾರ್ಡು ಮತ್ತು ಇದಕ್ಕೆ ಲಗತ್ತಿಸಿದ ಗುಣಲಕ್ಷಣಗಳು/ ಸೌಲಭ್ಯಗಳ ಪುನಃಸ್ಥಾಪನೆಗೆ ವಿಶ್ವಾಸಾರ್ಹ ಬಳಕೆಯ ತೃಪ್ತಿಕರ ಸಾಕ್ಷ್ಯಾಧಾರವನ್ನು ಒದಗಿಸುವ ಜವಾಬ್ದಾರಿಯು ಗ್ರಾಹಕರ ಮೇಲಿರುತ್ತದೆ. ಈ ನಿಟ್ಟಿನಲ್ಲಿ ಬ್ಯಾಂಕಿನ ನಿರ್ಧಾರವು ಅಂತಿಮವಾಗಿರುತ್ತದೆ ಹಾಗೂ ಗ್ರಾಹಕರು ಇದಕ್ಕೆ ಬದ್ಧರಾಗಿರಬೇಕು. ಇಂತಹ ಸಂದರ್ಭದಲ್ಲಿ ಕಾರ್ಡುದಾರನು (ಯಾವುದೇ ಪಾವತಿ ಲೋಪ ಅಥವಾ ಕಾನೂನಿನ ಪ್ರಕಾರ ಅಗತ್ಯವಿರುವ ಇತರ ನೋಟೀಸಿಗೆ ಒಳಪಟ್ಟು), ಖಾತೆಯಲ್ಲಿ ಬಾಕಿ ಇರುವ ಒಟ್ಟು ಪಾವತಿ ಮೊತ್ತವನ್ನು ತಕ್ಷಣವೇ ಸ್ಟಾಂಡರ್ಟ್ ಚಾರ್ಟರ್ಡ್ ಬ್ಯಾಂಕಿಗೆ ಪಾವತಿಸಬೇಕು. ಇದು, ಖಾತೆಗೆ ಇಲ್ಲಿಯತನಕ ವಿಧಿಸದೇ ಇರುವ ಎಲ್ಲಾ ವಹಿವಾಟುಗಳು ಮತ್ತು ಇತರ ಮೊತ್ತಗಳು ಸೇರಿದಂತೆ, ಈ ಒಪ್ಪಂದದ ಅಡಿಯಲ್ಲಿ ಬ್ಯಾಂಕಿಗೆ ಬರಬೇಕಾದ ಎಲ್ಲಾ ಮೊತ್ತಗಳನ್ನು ಒಳಗೊಂಡಿದೆ. ಇಂತಹ ಎಲ್ಲಾ ಬಾಕಿ ಮೊತ್ತಗಳನ್ನು ಕಾರ್ಡುದಾರ ಪಾವತಿಸುವ ತನಕ ಈ ಕಾರ್ಡನ್ನು ಮುಚ್ಚಲಾಗಿದೆ ಎಂದು ಪರಿಗಣಿಸಲಾಗುವುದಿಲ್ಲ.

ಪೂರಕ ಕಾರ್ಡುಗಳು

2.7 ನಾವು ಯಾವುದೇ ಪೂರಕ ಕಾರ್ಡುಗಳು, ಅವುಗಳ ಪಿನ್/ ಪಾಸ್ವರ್ಡ್ ಮತ್ತು ಎಲ್ಲಾ ಸಂಬಂಧಿತ ಸಂವಹನಗಳನ್ನು ನಿಮಗೆ ಕಳುಹಿಸುತ್ತೇವೆ.

2.8 ನಾವು ನಿಮಗೆ ಅಥವಾ ಯಾವುದೇ ಪೂರಕ ಕಾರ್ಡುದಾರನಿಗೆ ನೀಡುವ ಸಂವಹನವನ್ನು ನಿಮಗೆಲ್ಲರಿಗೂ ನೀಡಲಾಗಿದೆ ಎಂದು ಪರಿಗಣಿಸಲಾಗುತ್ತದೆ.

2.9 ನೀವು ಮತ್ತು ಪ್ರತಿ ಪೂರಕ ಕಾರ್ಡುದಾರರು, ನಿಮ್ಮಲ್ಲಿ ಯಾರಾದರೂ ನಮಗೆ ನೀಡುವ ಸೂಚನೆಗಳಿಗೆ ಬದ್ಧರಾಗಿರುತ್ತೀರಿ ಎಂಬುದನ್ನು ಒಪ್ಪಿಕೊಳ್ಳುತ್ತೀರಿ.

ಕೊ-ಬ್ರ್ಯಾಂಡ್ ಕಾರ್ಡುಗಳು

2.10 ನಾವು ಕೊ-ಬ್ರ್ಯಾಂಡ್ ಕಾರ್ಡನ್ನು ಇನ್ನೊಂದು ಪ್ರಕಾರದ ಕ್ರೆಡಿಟ್ ಕಾರ್ಡಿಗೆ ಪರಿವರ್ತಿಸಬಹುದು.

2.11 ವ್ಯವಹಾರ ಮೈತ್ರಿ ಪಾಲುದಾರರು ಮಾಡಿರುವ ಯಾವುದೇ ಪ್ರಾತಿನಿಧ್ಯಗಳು, ಪ್ರಚಾರಗಳು ಅಥವಾ ಜವಾಬ್ದಾರಿಗಳಿಗೆ ನಾವು ಹೊಣೆಗಾರರಲ್ಲ.

ವಿಶೇಷ ವ್ಯವಸ್ಥೆಯ ಮೂಲಕ ನೀಡಲಾದ ಕಾರ್ಡು

2.12 ಒಂದು ವೇಳೆ ಕ್ರೆಡಿಟ್ ಕಾರ್ಡನ್ನು ಒಂದು ಸಂಘಟನೆಯೊಂದಿಗೆ ವಿಶೇಷ ವ್ಯವಸ್ಥೆಯನ್ನು ಮಾಡುವ ಮೂಲಕ ನೀಡಲಾಗಿದ್ದರೆ, ನಾವು:

- ಸಂಘಟನೆಯೊಂದಿಗೆ ನಾವು ಹೊಂದಿರುವ ಬ್ಯಾಂಕಿಂಗ್ ಒಪ್ಪಂದಕ್ಕೆ ಸಂಬಂಧಿಸಿದಂತೆ ಮಾಹಿತಿಯನ್ನು ಬಹಿರಂಗಪಡಿಸಬಹುದು; ಮತ್ತು
- ನೀವು ನಮ್ಮ ಬ್ಯಾಂಕಿಂಗ್ ಒಪ್ಪಂದವನ್ನು ಕೊನೆಗೊಳಿಸಿದರೆ, ಸಂಘಟನೆಯೊಂದಿಗಿನ ನಿಮ್ಮ ಸಂಬಂಧವು ಸಹ ಕೊನೆಗೊಳ್ಳುತ್ತದೆ. ಹೆಚ್ಚಿನ ಮಾಹಿತಿಗಾಗಿ ಷರತ್ತು 11.3 ಅನ್ನು ನೋಡಿ.

3 ಸಾಲದ ಮಿತಿ

3.1 ನಿಮ್ಮ ಅರ್ಜಿಗೆ ಮಂಜೂರಾತಿ ನೀಡುವ ವೇಳೆ ನಿಮ್ಮ ಸಾಲದ ಮಿತಿಯನ್ನು ನಾವು ನಿಮಗೆ ತಿಳಿಸುತ್ತೇವೆ. ಸಾಲದ ಮಿತಿಯನ್ನು ಯಾವುದೇ ಸಮಯದಲ್ಲಿಯೂ ನಾವು ಬದಲಾಯಿಸಬಹುದು. ಆದರೂ, ನಿಮ್ಮ ಸಮ್ಮತಿಯೊಂದಿಗೆ ಮಾತ್ರವೇ ನಿಮ್ಮ ಸಾಲದ ಮಿತಿಯನ್ನು ಹೆಚ್ಚಿಸಲಾಗುವುದು. ಸಾಲದ ಮಿತಿಯನ್ನು ಬದಲಾಯಿಸುವ ವೇಳೆ, ಯಾವುದೇ ಉತ್ಪನ್ನಕ್ಕೆ ಸಂಬಂಧಿಸಿದಂತೆ ನೀವು ನೀಡಿದ ತೀರಾ ಇತ್ತೀಚಿನ ಆದಾಯ ಮಾಹಿತಿಯನ್ನು ನಾವು ಪರಿಗಣಿಸಬಹುದು.

3.2 ಸಾಲದ ಮಿತಿಯು ಒಟ್ಟಾರೆ ಮಿತಿಯಾಗಿದ್ದು ನಿಮಗೆ ನೀಡಲಾದ ಎಲ್ಲಾ ಕ್ರೆಡಿಟ್ ಕಾರ್ಡುಗಳಿಗೆ ಇದು ಅನ್ವಯವಾಗುತ್ತದೆ. ನೀವು ಕೇಳಿದಲ್ಲಿ , ನಿರ್ದಿಷ್ಟ ಕ್ರೆಡಿಟ್ ಕಾರ್ಡಿಗೆ, ಒಟ್ಟಾರೆ ಮಿತಿಗಿಂತ ಕಡಿಮೆ ಮೊತ್ತದ ಮಿತಿಯನ್ನು ವ್ಯವಸ್ಥೆಗೊಳಿಸಲು ನಾವು ಒಪ್ಪಬಹುದು.

ನಿಮ್ಮ ಸಾಲದ ಮಿತಿಯನ್ನು ಮೀರುವುದು

3.3 ಸಾಲದ ಮಿತಿಯನ್ನು ಮೀರದಂತೆ ಖಾತರಿಪಡಿಸುವುದು ನಿಮ್ಮ ಜವಾಬ್ದಾರಿಯಾಗಿದೆ.

3.4 ಸಾಲದ ಮಿತಿಯನ್ನು ಮೀರಲಾಗಿದೆ ಎಂಬುದನ್ನು ಲೆಕ್ಕ ಹಾಕುವಾಗ ನಾವು ಈ ಕೆಳಗಿನ ವಿಚಾರಗಳನ್ನು ಪರಿಗಣಿಸಬಹುದು:

- ಕ್ರೆಡಿಟ್ ಕಾರ್ಡ್‌ನ್ನು ಬಳಸಿ ಮಾಡಿದ ಯಾವುದೇ ವಹಿವಾಟು, ಆದರೆ ಕ್ರೆಡಿಟ್ ಕಾರ್ಡಿನ ಖಾತೆಯಿಂದ ಆದನ್ನು ಡೆಬಿಟ್ ಮಾಡಲಾಗಿಲ್ಲ; ಮತ್ತು
- ಕ್ರೆಡಿಟ್ ಕಾರ್ಡ್ ಬಳಸಿ ಮಾಡುವ ಪ್ರಸ್ತಾವಿತ ವಹಿವಾಟಿಗೆ ಸಂಬಂಧಿಸಿದಂತೆ ಮೂರನೇ ಪಕ್ಷಕ್ಕೆ ನಾವು ನೀಡಿರುವ ಯಾವುದೇ ಅನುಜ್ಞೆ.

ಸಾಲದ ಮಿತಿ ದಾಟಿದಾಗ

3.5 ನೀವು ಸಾಲದ ಮಿತಿಯನ್ನು ದಾಟಿದ್ದರೆ ಅಥವಾ ಯಾವುದೇ ತಾತ್ಕಾಲಿಕ ಸಾಲ ಮಿತಿ ವಿಸ್ತರಣೆಯು ಮುಗಿದಿದ್ದರೆ, ಸಾಲ ಮಿತಿಯನ್ನು ದಾಟುವ ಕ್ರೆಡಿಟ್ ಕಾರ್ಡಿನ ಖಾತೆಗೆ ಬಾಕಿ ಇರುವ ಮೊತ್ತದ ಆ ಭಾಗವನ್ನು ನಮಗೆ ಬೇಕಿರುವ ಯಾವುದೇ ಪಾವತಿಯೊಂದಿಗೆ ನೀವು ತಕ್ಷಣವೇ ನಮಗೆ ಪಾವತಿ ಮಾಡಬೇಕು.

4 ಮುಂಗಡ ನಗದು

ಮುಂಗಡ ನಗದವನ್ನು ಪಡೆಯುವುದು ಹೇಗೆ

4.1 ನಮ್ಮ ಯಾವುದಾದರೂ ಒಂದು ಶಾಖೆಯಲ್ಲಿ , ಕಾರ್ಡಿನ ಸಂಯೋಜನೆಯ ಹಾಗೂ ಯಾವುದೇ ಲೋಗೋ ಅನ್ನು ಪ್ರದರ್ಶಿಸುವ ಇತರ ಹಣಕಾಸು ಸಂಸ್ಥೆಗಳಲ್ಲಿ ನೀವು ಮುಂಗಡ ನಗದನ್ನು ಪಡೆಯಬಹುದು.

ಮುಂಗಡ ನಗದಿನ ಮೇಲಿನ ಗರಿಷ್ಠ ಮಿತಿ

4.1 ಮುಂಗಡವನ್ನು ಒದಗಿಸುವ ವ್ಯಕ್ತಿಯು ಅನುಮತಿಸಿದ ಗರಿಷ್ಠ ಮೊತ್ತದ ತನಕ ಮಾತ್ರವೇ ಮುಂಗಡ ನಗದು ಲಭ್ಯ. ನಾವು ಅನುಮತಿಸುವ ಗರಿಷ್ಠ ಮೊತ್ತದ ಕುರಿತ ವಿವರಗಳಿಗಾಗಿ, ನಮ್ಮನ್ನು ಸಂಪರ್ಕಿಸಿ.

5 ಮೊತ್ತದ ವರ್ಗಾವಣೆ

5.1 ನೀವು ಕೇಳಿದರೆ, ನಾವು ಸೂಚಿಸುವ ಯಾವುದೇ ಷರತ್ತುಗಳಿಗೆ ಒಳಪಟ್ಟು ನಾವು ಮೊತ್ತದ ವರ್ಗಾವಣೆಗೆ ಅನುಮತಿ ನೀಡಬಹುದು.

5.2 ಖಾತೆಗೆ ಜಮೆಯಾಗಿದೆ ಎಂದು ನಾವು ದೃಢೀಕರಿಸುವ ತನಕ, ನೀವು ಯಾವ ಖಾತೆಯಿಂದ ಮೊತ್ತವನ್ನು ವರ್ಗಾಯಿಸಲು ಇಚ್ಛಿಸುತ್ತೀರೋ, ಆ ಖಾತೆಗೆ ಯಾವುದೇ ಅಗತ್ಯವಿರುವ ಪಾವತಿಗಳನ್ನು ಮಾಡುವುದನ್ನು ನೀವು ಮುಂದುವರಿಸಬೇಕು. ನೀವು ಯಾವ ಖಾತೆಯಿಂದ ಮೊತ್ತವನ್ನು ವರ್ಗಾಯಿಸುತ್ತೀರೋ, ಆ ಖಾತೆಗೆ ಸಂಬಂಧಿಸಿದಂತೆ ಯಾವುದೇ ತಡವಾದ ಪಾವತಿ ಅಥವಾ ಉಂಟಾಗುವ ಬಡ್ಡಿಗೆ ನಾವು ಜವಾಬ್ದಾರರಲ್ಲ.

6 ಬಡ್ಡಿ, ಶುಲ್ಕಗಳು ಮತ್ತು ವೆಚ್ಚಗಳು

6.1 ಬಡ್ಡಿ, ಶುಲ್ಕಗಳು ಮತ್ತು ವೆಚ್ಚಗಳನ್ನು (ಹಣಕಾಸು ವೆಚ್ಚಗಳು, ಮುಂಗಡ ನಗದು ಶುಲ್ಕಗಳು, ಅಧಿಕ ಮಿತಿ ಶುಲ್ಕಗಳು, ವಾರ್ಷಿಕ ಶುಲ್ಕಗಳು ಮತ್ತು ಆಡಳಿತಾತ್ಮಕ ಶುಲ್ಕಗಳು) ದರ ಪಟ್ಟಿಯಲ್ಲಿ ತಿಳಿಸಲಾಗಿದೆ.

6.2 ನಿರ್ದಿಷ್ಟವಾಗಿ ಹೇಳದ ಹೊರತು, ಬಡ್ಡಿಯನ್ನು ವರ್ಷದ 365 ದಿನಗಳ ಆಧಾರದಲ್ಲಿ (ಅಧಿಕ ವರ್ಷವಾಗಿದ್ದಲ್ಲಿ ವರ್ಷಕ್ಕೆ 366 ದಿನಗಳು) ಲೆಕ್ಕ ಹಾಕಲಾಗುತ್ತದೆ ಹಾಗೂ ಮಾಸಿಕ ಆಧಾರದಲ್ಲಿ ಅಥವಾ ನಾವು ಆಯ್ದುಕೊಳ್ಳುವ ಅಂತಹ ಇತರ ಆಧಾರದಲ್ಲಿ ಸಂಯೋಜಿಸಲಾಗುತ್ತದೆ.

6.3 ಬಾಕಿ ಇರುವ ಮೊತ್ತವನ್ನು ಸಂಪೂರ್ಣವಾಗಿ ಪಾವತಿಸುವ ದಿನದ ತನಕ ಬಡ್ಡಿಯನ್ನು ವಿಧಿಸಲಾಗುತ್ತದೆ.

6.4 ಕ್ರೆಡಿಟ್ ಕಾರ್ಡಿಗೆ ಸಂಬಂಧಿಸಿದಂತೆ ನಮಗೆ ಉಂಟಾಗುವ ಸಾಲ ವಸೂಲಾತಿ ಶುಲ್ಕಗಳು ಇತ್ಯಾದಿ ಎಲ್ಲಾ ವೆಚ್ಚಗಳನ್ನು ಬೇಡಿಕೆಯ ಮೇರೆಗೆ ನೀವು ನಮಗೆ ಪಾವತಿಸಬೇಕು.

7 ಹೊಣೆಗಾರಿಕೆ

ಸಾಮಾನ್ಯ

7.1 ನೀವು ಈ ಕೆಳಗಿನವುಗಳಿಗೆ ಹೊಣೆಗಾರರಾಗಿದ್ದೀರಿ:

- ನಮ್ಮ ಬ್ಯಾಂಕಿಂಗ್ ಒಪ್ಪಂದ ನಿಯಮಗಳನ್ನು ಅನುಸರಿಸಲು ನೀವು ಅಥವಾ ಯಾವುದೇ ಕಾರ್ಡುದಾರರು ಯಾವುದೇ ರೀತಿಯಲ್ಲಿ ವಿಫಲರಾದಲ್ಲಿ;
- ಯಾವುದೇ ವಿವಾದ ಅಥವಾ ನೀವು ಮಾಡಬಹುದಾದ ಕ್ಲೇಮಿನ ಹೊರತಾಗಿಯೂ ಕ್ರೆಡಿಟ್ ಕಾರ್ಡನ್ನು ಬಳಸಿಕೊಂಡು ಮಾಡುವ ಎಲ್ಲಾ ವಹಿವಾಟುಗಳು, ನೀವು ಸಾಬೀತುಪಡಿಸುವ ಯಾವುದೇ ವಿವಾದಿತ ವಹಿವಾಟುಗಳಲ್ಲದೆ, ನಿಮ್ಮಿಂದ ಅಥವಾ ಯಾವುದೇ ಕಾರ್ಡುದಾರದಿಂದ ನಮ್ಮ ಬ್ಯಾಂಕಿಂಗ್ ಒಪ್ಪಂದ ನಿಯಮಗಳನ್ನು ಅನುಸರಿಸಲು ವಿಫಲತೆ;
- ಯಾವುದೇ ವಿವಾದ ಅಥವಾ ನೀವು ಮಾಡಬಹುದಾದ ಕ್ಲೇಮಿನ ಹೊರತಾಗಿಯೂ ಕ್ರೆಡಿಟ್ ಕಾರ್ಡನ್ನು ಬಳಸಿಕೊಂಡು ಮಾಡುವ ಎಲ್ಲಾ ವಹಿವಾಟುಗಳು, ಗ್ರಾಹಕ ನಿಯಮಗಳ ಷರತ್ತು 17ಕ್ಕೆ ಅನುಗುಣವಾಗಿ ನೀವು ಬೇರೆ ರೀತಿಯಾಗಿ ಸಾಬೀತುಪಡಿಸಿದರೆ;
- ಕ್ರೆಡಿಟ್ ಕಾರ್ಡಿನ ಖಾತೆಗೆ ಬಾಕಿ ಇರುವ ಮೊತ್ತ (ಯಾವುದೇ ಪೂರಕ ಕಾರ್ಡುದಾರನಿಂದ ಕ್ರೆಡಿಟ್ ಕಾರ್ಡಿನ ಖಾತೆಗೆ ಡೆಬಿಟ್ ಹಾಗೂ ಕ್ರೆಡಿಟ್ ಮಾಡಲಾದ ಎಲ್ಲಾ ಮೊತ್ತಗಳು ಸೇರಿ); ಮತ್ತು
- ಅಗತ್ಯವಿರುವ ಸಮಯ ಮಿತಿಯೊಳಗೆ ವಹಿವಾಟಿನ ಕುರಿತು ನೀವು ನಮಗೆ ತಿಳಿಸದೆ ಇದ್ದರೆ ಮತ್ತು ನಮಗೆ ಅಗತ್ಯವಿರುವ ಯಾವುದೇ ಹೆಚ್ಚುವರಿ ದಾಖಲೆಗಳು ಅಥವಾ ಮಾಹಿತಿಯನ್ನು ಒದಗಿಸದೆ ಇದ್ದರೆ, ಉಳಿದಂತೆ ನಾವು ಚಾರ್ಜ್ ಬ್ಯಾಕ್ ಹಕ್ಕುಗಳನ್ನು ಚಲಾಯಿಸುತ್ತಿದ್ದ ಯಾವುದೇ ವಹಿವಾಟುಗಳು.

ನೀವು ಮತ್ತು ಪೂರಕ ಕಾರ್ಡುದಾರರ ನಡುವಿನ ವಿವಾದಗಳು

7.2 ನಿಮಗೆ ಮತ್ತು ಪ್ರತಿ ಪೂರಕ ಕಾರ್ಡುದಾರರಿಗೆ ಸಂಬಂಧಿಸಿದಂತೆ ನಾವು ಹೊಂದಿರುವ ಹಕ್ಕುಗಳು ಮತ್ತು ಕಟ್ಟುಪಾಡುಗಳು, ನೀವು ಮತ್ತು ಪೂರಕ ಕಾರ್ಡುದಾರರು ಪರಸ್ಪರ ವಿರುದ್ಧವಾಗಿ ಹೊಂದಿರಬಹುದಾದ ಯಾವುದೇ ವಿವಾದ ಅಥವಾ ಕ್ಲೇಮಿನಿಂದಾಗಿ ಬಾಧಿಸಲ್ಪಡುವುದಿಲ್ಲ.

ಸರಕುಗಳು ಮತ್ತು ಸೇವೆಗಳ ಖರೀದಿ

7.3 ನಾವು ಈ ಕೆಳಗಿನವುಗಳಿಗೆ ಜವಾಬ್ದಾರರಲ್ಲ:

- ಕ್ರೆಡಿಟ್ ಕಾರ್ಡನ್ನು ಸ್ವೀಕರಿಸಲು ಯಾವುದೇ ವ್ಯಾಪಾರಿ, ಹಣಕಾಸು ಸಂಸ್ಥೆ ಅಥವಾ ಇತರ ವ್ಯಕ್ತಿಯು ತಿರಸ್ಕರಿಸಿದರೆ; ಮತ್ತು
- ಯಾವುದೇ ವ್ಯಾಪಾರಿ, ಹಣಕಾಸು ಸಂಸ್ಥೆ ಅಥವಾ ಇತರ ವ್ಯಕ್ತಿಯು ಒದಗಿಸಿದ ಸರಕುಗಳು ಅಥವಾ ಸೇವೆಗಳಲ್ಲಿ ಯಾವುದೇ ದೋಷ ಅಥವಾ ಕೊರತೆ ಇದ್ದಲ್ಲಿ.

ಯಾವುದೇ ವ್ಯಾಪಾರಿ, ಹಣಕಾಸು ಸಂಸ್ಥೆ ಅಥವಾ ಇತರ ವ್ಯಕ್ತಿಯ ವಿರುದ್ಧ ಯಾವುದೇ ದೂರುಗಳಿದ್ದಲ್ಲಿ ನೀವು ಬಗೆಹರಿಸಬೇಕು ಹಾಗೂ ಅವುಗಳಲ್ಲಿ ಯಾವುದಾದರೂ ವಿರುದ್ಧ ಇರುವ ಕ್ಲೇಮನ್ನು ನಮ್ಮ ವಿರುದ್ಧ ಸರಿ ಹೊಂದಿಸುವಂತಿಲ್ಲ.

ಕ್ರೆಡಿಟ್ ಕಾರ್ಡುಗಳಿಂದ ನೀಡುವ ಮೂರನೇ ಪಕ್ಷದ ಸೇವೆಗಳು

7.4 ಕೆಲವು ಪ್ರಕಾರಗಳ ಕ್ರೆಡಿಟ್ ಕಾರ್ಡುಗಳು, ಮೂರನೇ ಪಕ್ಷಗಳು ಒದಗಿಸುವ ಮತ್ತು ಪಾವತಿಸುವ ಸೇವೆಗಳಿಗೆ ನಿಮಗೆ ಆಕ್ಸೆಸ್ ನೀಡುತ್ತವೆ. ಉದಾಹರಣೆಗೆ, ನೀವು ವೀಸಾ ಗೋಲ್ಡ್ ಕಾರ್ಡ್ ಅಥವಾ ವೀಸಾ ಪ್ಲಾಟಿನಂ ಕಾರ್ಡನ್ನು ಹೊಂದಿದ್ದಲ್ಲಿ, ನಿಮಗೆ ಇಂಟರ್ ನ್ಯಾಷನಲ್ ಎಮರ್ಜೆನ್ಸಿ ಅಸಿಸ್ಟೆನ್ಸ್ ಸರ್ವಿಸ್ ಗೆ ಆಕ್ಸೆಸ್ ಇರುತ್ತದೆ. ಈ ಮೂರನೇ ಪಕ್ಷ ಸೇವೆಗಳ ಅಡಿಯಲ್ಲಿ ಒದಗಿಸಲಾಗುವ ಯಾವುದೇ ವೈದ್ಯಕೀಯ, ಕಾನೂನು ಅಥವಾ ಇತರ ಸೇವೆಗಳ ವೆಚ್ಚಕ್ಕೆ ನೀವು ಹೊಣೆಗಾರರು. ಮೂರನೇ ಪಕ್ಷ ಸೇವೆ ಒದಗಿಸುವವರು ಕಾರ್ಡುದಾರರಿಗೆ ಸೇವೆಯನ್ನು ಒದಗಿಸಲು ತಮ್ಮೆಲ್ಲ ಪ್ರಯತ್ನವನ್ನು ಮಾಡುತ್ತಾರೆ ಹಾಗೂ ಸೇವೆಯು ಯಾವಾಗಲೂ ಲಭ್ಯವಿರದೆ ಇರಬಹುದು (ಉದಾಹರಣೆಗೆ, ಸಮಯ, ಅಂತ ಅಥವಾ ಸ್ಥಳದ ಕಾರಣ) ಎಂಬುದನ್ನು ನೀವು ಒಪ್ಪಿಕೊಳ್ಳುತ್ತೀರಿ. ಯಾವುದೇ ಸೇವೆಗೆ ಸಂಬಂಧಿಸಿದಂತೆ ಉಂಟಾದ ಯಾವುದೇ ನಷ್ಟ ಅಥವಾ ಇದರ ಅಲಭ್ಯತೆಗೆ ನಾವಾಗಲಿ ಅಥವಾ ಮೂರನೇ ಪಕ್ಷ ಸೇವೆ ಒದಗಿಸುವವರಾಗಲಿ ಅಥವಾ ಮೇಲಿನ ಉದಾಹರಣೆಯ ವಿಚಾರದಲ್ಲಿ ವೀಸಾ ಇಂಟರ್ ನ್ಯಾಷನಲ್ ಸರ್ವಿಸ್ ಎಸೋಸಿಯೇಶನ್ ಆಗಲಿ ಜವಾಬ್ದಾರರಲ್ಲ.

7.5 ಎಮರ್ಜೆನ್ಸಿ ಕ್ಯಾಶ್ ವಿತ್ ಡ್ರಾವಲ್, ಬದಲಿ ಕಾರ್ಡ್ ಅಥವಾ ಕ್ರೆಡಿಟ್ ಕಾರ್ಡಿಗೆ ಸಂಬಂಧಿಸಿದಂತೆ ನಾವು ತ್ವರೆ ಮಾಡುವ ಇತರ ಯಾವುದೇ ಸೌಲಭ್ಯಗಳನ್ನು ತಕ್ಷಣ ಜಾರಿಗೊಳಿಸಲು ನಾವು ವಿಫಲರಾದರೆ, ಎಮರ್ಜೆನ್ಸಿ ಕ್ಯಾಶ್ ವಿತ್ ಡ್ರಾವಲ್ ಆಕ್ಸೆಸ್ ಹೊಂದಿರುವ ಕ್ರೆಡಿಟ್ ಕಾರ್ಡುದಾರರಿಗೆ ಉಂಟಾಗಬಹುದಾದ ಯಾವುದೇ ನಷ್ಟಕ್ಕೆ ನಾವು ಜವಾಬ್ದಾರರಲ್ಲ.

ಗ್ರಾಹಕ ಪದಗಳು, ನೀವು ನಮಗೆ ಹೊಂದಿರುವ ಹೆಚ್ಚುವರಿ ಮುನ್ನೇರ್ಪಾಡುಗಳು ಮತ್ತು ನಮ್ಮ ಹೊಣೆಗಾರಿಕೆಯ ಮೇಲಿನ ಹೊರಗಿಡುವಿಕೆಗಳು ಅಥವಾ ಮಿತಿಗಳನ್ನು ಒಳಗೊಂಡಿವೆ. ಉದಾಹರಣೆಗೆ, ನೋಡಿ, ''ನೀವು ನಮಗೆ ನಷ್ಟ ತುಂಬಿ ಕೊಡುತ್ತೀರಿ'' ಮತ್ತು ''ಹೊಣೆಗಾರಿಕೆಯ ಹೊರಗಿಡುವಿಕೆ''.

8 **ನಿಮ್ಮ ಖಾತೆಗೆ ನೀಡುವ ಹೆಚ್ಚುವರಿ ಸೇವೆಗಳು**

8.1 ನಿಮ್ಮ ಖಾತೆಗೆ ನಾವು ಹೆಚ್ಚುವರಿ ಸೇವೆಗಳನ್ನು ನೀಡಬಹುದು. ಇವುಗಳು ರಿವಾರ್ಡ್ ಪ್ರೋಗ್ರಾಂಗಳು, ಮೊತ್ತ ವರ್ಗಾವಣೆ ಯೋಜನೆಗಳು, ಪಾವತಿ ವ್ಯವಸ್ಥೆಗಳು, ಕಾರ್ಡು ರಕ್ಷಣೆ ಮತ್ತು ನಾವು ಸಲಹೆ ಮಾಡುವ ಅಥವಾ ಇಲ್ಲದಿದ್ದಲ್ಲಿ ಕಾಲದಿಂದ ಕಾಲಕ್ಕೆ ದೊರೆಯುವ ಇತರ ಸೇವೆಗಳನ್ನು ಒಳಗೊಂಡಿರಬಹುದು. ನಮ್ಮನ್ನು ಸಂಪರ್ಕಿಸುವ ಮೂಲಕ ಲಭ್ಯ ಸೇವೆಗಳ ಕುರಿತು ಹೆಚ್ಚಿನ ಮಾಹಿತಿಯನ್ನು ನೀವು ಪಡೆಯಬಹುದು.

8.2 ಒಂದು ವೇಳೆ ನೀವು ಹೆಚ್ಚುವರಿ ಸೇವೆಗಳಿಗಾಗಿ ಸೈನ್ ಅಪ್ ಆದಲ್ಲಿ , ಹೆಚ್ಚುವರಿ ಸೇವೆಗಳ ನಿಯಮಗಳಿಗೆ ನೀವು ಬದ್ಧರಾಗಿರುತ್ತೀರಿ. ಹೆಚ್ಚುವರಿ ಸೇವೆಗಳ ನಿಯಮಗಳು ಮತ್ತು ನಮ್ಮ ಬ್ಯಾಂಕಿಂಗ್ ಒಪ್ಪಂದದ ನಡುವಿನ ಅಸಂಗತತೆಯ ಮಟ್ಟಿಗೆ, ಹೆಚ್ಚುವರಿ ಸೇವೆಗಳ ನಿಯಮಗಳು ಬೇರೆಯೇ ರೀತಿಯಲ್ಲಿ ಹೇಳದ ಹೊರತು ನಮ್ಮ ಬ್ಯಾಂಕಿಂಗ್ ಒಪ್ಪಂದವು ಉಳಿದುಕೊಳ್ಳುತ್ತದೆ.

8.3 ಚಾಲ್ತಿಯಲ್ಲಿರುವ ನಿಮ್ಮ ಕ್ರೆಡಿಟ್ ಕಾರ್ಡನ್ನು, ನೀವು ಅರ್ಜಿ ಹಾಕಿದಾಗ, ಹೊಸ ಕ್ರೆಡಿಟ್ ಕಾರ್ಡಿಗೆ ಮೇಲ್ದರ್ಜೆಗೆ ಏರಿಸಬಹುದು. ವಿಶೇಷವಾಗಿ ಹೊಸ ಕ್ರೆಡಿಟ್ ಕಾರ್ಡಿನ ಮೇಲ್ದರ್ಜೆಗೆ ಈ ಕೆಳಗಿನ ನಿಯಮಗಳು ಅನ್ವಯವಾಗುತ್ತವೆ.

8.3.1 ನಿಮ್ಮ ಹೊಸ (ಮೇಲ್ದರ್ಜೆಗೇರಿಸಿದ) ಕ್ರೆಡಿಟ್ ಕಾರ್ಡನ್ನು ಅದಕ್ಕೆ ಯಶಸ್ವಿಯಾಗಿ ಅರ್ಜಿ ಸಲ್ಲಿಸಿದ 2 ಕರ್ತವ್ಯದ ದಿನಗಳೊಳಗೆ ವ್ಯವಸ್ಥೆಗೊಳಿಸಲಾಗುತ್ತದೆ.

8.3.2 ಹೊಸ ಕ್ರೆಡಿಟ್ ಕಾರ್ಡನ್ನು ವ್ಯವಸ್ಥೆಗೊಳಿಸಿದ ನಂತರ 35 ದಿನಗಳ ಕಾಲ ನಿಮ್ಮ ಚಾಲ್ತಿಯಲ್ಲಿರುವ ಕ್ರೆಡಿಟ್ ಕಾರ್ಡು ಸಕ್ರಿಯವಾಗಿರುತ್ತದೆ ಹಾಗೂ ತದನಂತರ ಎಲ್ಲಾ ವಹಿವಾಟುಗಳಿಗಾಗಿ ಚಾಲ್ತಿಯಲ್ಲಿರುವ ಕ್ರೆಡಿಟ್ ಕಾರ್ಡನ್ನು ನಿಷ್ಕ್ರಿಯಗೊಳಿಸಲಾಗುತ್ತದೆ ಹಾಗೂ ರದ್ದುಪಡಿಸಲಾಗುತ್ತದೆ.

8.3.3 ಚಾಲ್ತಿಯಲ್ಲಿರುವ ಕ್ರೆಡಿಟ್ ಕಾರ್ಡಿನ ಲೆಕ್ಕಪಟ್ಟಿಯನ್ನು, ಇದು 35 ದಿನಗಳಿಗೆ ಮಿಗಿಲಾಗಿದ್ದರೂ, ಆ ಕ್ರೆಡಿಟ್ ಕಾರ್ಡಿನ ಮೇಲಿನ ಬಾಕಿ ಇರುವ ಮೊತ್ತವನ್ನು ಪಾವತಿಸುವ ತನಕ ಸೃಷ್ಟಿಸುವುದನ್ನು ಮುಂದುವರಿಸಲಾಗುತ್ತದೆ. ತಯಾರಿಸಿರುವ ಸ್ಟೇಟ್‌ಮೆಂಟ್ ಪ್ರಕಾರ, ಬಾಕಿ ಉಳಿದಿರುವ ಮೊತ್ತವನ್ನು ಚುಕ್ತಗೊಳಿಸಲು ನೀವು ಚಾಲ್ತಿಯಲ್ಲಿರುವ ಕ್ರೆಡಿಟ್ ಕಾರ್ಡ್ ಮೇಲೆ ಹಣ ಕಟ್ಟಲೇಬೇಕು.

8.3.4 ಪ್ರೈಮರಿ ಮತ್ತು ಸಪ್ಲಿಮೆಂಟರಿ ಕಾರ್ಡ್, ಎರಡೂ ಒಂದೇ ರೀತಿಯ ಕಾರ್ಡ್ ಆಗಿದ್ದು , ಸಪ್ಲಿಮೆಂಟರಿ ಕಾರ್ಡ್ ಆ್ಯಕ್ಟಿವ್ ಆಗಿದ್ದರೆ, ಡಿಫಾಲ್ಟ್ ರೂಪದಲ್ಲಿ ಸಪ್ಲಿಮೆಂಟರಿ ಕಾರ್ಡನ್ನು ಅಪ್‌ಗ್ರೇಡ್ ಮಾಡಲಾಗುತ್ತದೆ. ಒಂದುವೇಳೆ ಸಪ್ಲಿಮೆಂಟರಿ ಕಾರ್ಡನ್ನು ಈಸ್‌ಮೈಟ್ರಿಪ್ ಕ್ರೆಡಿಟ್ ಕಾರ್ಡ್ ಅಥವಾ ರಿವಾರ್ಡ್ಸ್ ಕ್ರೆಡಿಟ್ ಕಾರ್ಡ್ ಆಗಿ ಅಪ್‌ಗ್ರೇಡ್ ಮಾಡಿದ್ದರೆ, ಆ ಕಾರ್ಡ್‌ದಾರರಿಗೆ ಎಮ್‌ಐಟಿಸಿ ಪ್ರಕಾರ ವಾರ್ಷಿಕ ಫೀಸನ್ನು ವಿಧಿಸಲಾಗುತ್ತದೆ.

8.3.5 ಹೊಸ ಕ್ರೆಡಿಟ್ ಕಾರ್ಡಿನ ವಿವರಪತ್ರದ ತಯಾರಿ ಮತ್ತು ಪಾವತಿ ಬಾಕಿ ದಿನಾಂಕವು ಪರಿಷ್ಕೃತ ಕ್ರೆಡಿಟ್ ಕಾರ್ಡ್ ವೇರಿಯಂಟ್ ಅನ್ನು ಆಧರಿಸಿ ಬದಲಾಗಬಹುದು.

8.3.6 ಈಗ ಇರುವ ಕ್ರೆಡಿಟ್ ಕಾರ್ಡಿನ ಮೇಲೆ ಗಳಿಸಿದ ರಿವಾರ್ಡ್ ಪಾಯಿಂಟುಗಳನ್ನು ಸ್ವಯಂಚಾಲಿತವಾಗಿ 35 ದಿನಗಳೊಳಗೆ ವರ್ಗಾಯಿಸಲಾಗುತ್ತದೆ. ಆದರೂ, ಮೇಲ್ದರ್ಜೆಗೆ ಏರಿಸಿದ ಹೊಸ ಕ್ರೆಡಿಟ್ ಕಾರ್ಡು ಡಿಜಿಸ್ಮಾರ್ಟ್ ಕ್ರೆಡಿಟ್ ಕಾರ್ಡ್, ಈಸ್ ಮೈ ಟ್ರಿಪ್ ಕ್ರೆಡಿಟ್ ಕಾರ್ಡ್, ಅಲ್ಟಿಮೇಟ್ ಕ್ರೆಡಿಟ್ ಕಾರ್ಡ್ ಅಥವಾ ಸ್ಮಾರ್ಟ್ ಕ್ರೆಡಿಟ್ ಕಾರ್ಡ್ ಆಗಿದ್ದಲ್ಲಿ, ಚಾಲ್ತಿಯಲ್ಲಿರುವ ಕ್ರೆಡಿಟ್ ಕಾರ್ಡಿನ ಮೇಲೆ ಗಳಿಸಿದ ರಿವಾರ್ಡ್ ಪಾಯಿಂಟ್ ಗಳನ್ನು, ಹೊಸ ಕಾರ್ಡು ನೀಡಿದ 35 ದಿನಗಳೊಳಗೆ ರಿವಾರ್ಡ್ 360 ಪೋರ್ಟಲ್ ನಲ್ಲಿ ರಿಡೀಮ್ ಮಾಡಬೇಕು ಮತ್ತು ಈ ರಿವಾರ್ಡ್ ಪಾಯಿಂಟ್ ಗಳನ್ನು ಮೇಲ್ದರ್ಜೆಗೆ ಏರಿಸಿದ ಕ್ರೆಡಿಟ್ ಕಾರ್ಡಿಗೆ ವರ್ಗಾಯಿಸಲಾಗುವುದಿಲ್ಲ. ಚಾಲ್ತಿಯಲ್ಲಿರುವ ಕ್ರೆಡಿಟ್ ಕಾರ್ಡಿನಲ್ಲಿ ಗಳಿಸಿದ ಕ್ಯಾಶ್ ಬ್ಯಾಕ್ ಅನ್ನು (ಅನ್ವಯವಾದಲ್ಲಿ) ನೀವು 35 ದಿನಗಳೊಳಗೆ ರಿವಾರ್ಡ್ಸ್ 360 ಪೋರ್ಟಲ್ ನಲ್ಲಿ ರಿಡೀಮ್ ಮಾಡಬೇಕು ಮತ್ತು ಹೊಸ ಕ್ರೆಡಿಟ್ ಕಾರ್ಡಿಗೆ ಇದನ್ನು ವರ್ಗಾಯಿಸಲಾಗುವುದಿಲ್ಲ.

8.3.7 ಈಗ ಇರುವ ಕ್ರೆಡಿಟ್ ಕಾರ್ಡಿಗೆ ಸಂಪರ್ಕಿಸಿದ ಎಲ್ಲಾ ಸಾಲ ಖಾತೆಗಳು (ಇಎಂಐ ಮತ್ತು ಕಾರ್ಡಿನ ಮೇಲೆ ಪಡೆದ ಸಾಲ) ಸಕ್ರಿಯವಾಗಿ ಉಳಿಯುತ್ತವೆ ಮತ್ತು ತಯಾರಿಸಲಾದ ವಿವರಪತ್ರಕ್ಕೆ ಅನುಗುಣವಾಗಿ ಬಾಕಿ ಇರುವ ಮೊತ್ತವನ್ನು ನೀವು ಪಾವತಿಸಬೇಕು.

8.3.8 ಚಾಲ್ತಿಯಲ್ಲಿರುವ ಕ್ರೆಡಿಟ್ ಕಾರ್ಡಿನ ಕ್ರೆಡಿಟ್ ಕಾರ್ಡ್ ಮರುಪಾವತಿ ಸೂಚನೆಗಳನ್ನು (ಎಸ್.ಐ/ಎನ್.ಎ.ಸಿ.ಎಚ್) ಹೊಸ ಕ್ರೆಡಿಟ್ ಕಾರ್ಡಿಗೆ ವರ್ಗಾಯಿಸಲಾಗುತ್ತದೆ.

8.3.9 ಚಾಲ್ತಿಯಲ್ಲಿರುವ ಕ್ರೆಡಿಟ್ ಕಾರ್ಡಿನಲ್ಲಿ ವ್ಯವಸ್ಥೆಗೊಳಿಸಲಾದ ಎಲ್ಲಾ ಬಿಲ್ ಪಾವತಿ ಸೂಚನೆಗಳನ್ನು (ಯುಟಿಲಿಟಿ ಬಿಲ್, ಟೆಲಿಕಾಂ ಬಿಲ್ ಗಳು, ಇತ್ಯಾದಿ ಬಿಲ್ಲರ್ ಪಾವತಿಗಳು) ಹೊಸ ಕ್ರೆಡಿಟ್ ಕಾರ್ಡಿಗೆ ವರ್ಗಾಯಿಸಲಾಗುವುದಿಲ್ಲ. ನೀವು ಹೊಸ ಕ್ರೆಡಿಟ್ ಕಾರ್ಡಿನಲ್ಲಿ ಎಲ್ಲಾ ಬಿಲ್ಲರ್ ಅನ್ನು/ಗಳನ್ನು ಮರುನೋಂದಣಿ ಮಾಡಬೇಕು.

9 ಪಾವತಿಗಳು

ಬಾಕಿ ಪಾವತಿ ದಿನಾಂಕದೊಳಗೆ ಪಾವತಿ

9.1 ನಿಮ್ಮ ಕ್ರೆಡಿಟ್ ಕಾರ್ಡಿಗಾಗಿ ನಾವು ನೀಡಿರುವ ಲೆಕ್ಕಪಟ್ಟಿಯಲ್ಲಿ ಸೂಚಿಸಲಾದ ಬಾಕಿ ಪಾವತಿ ದಿನಾಂಕದಂದು ಅಥವಾ ಮೊದಲು, ಲೆಕ್ಕಪಟ್ಟಿಯಲ್ಲಿ ಸೂಚಿಸಿರುವಂತೆ ಕನಿಷ್ಠ ಪಕ್ಷ ಬಾಕಿ ಇರುವ ಕನಿಷ್ಠ ಮೊತ್ತವನ್ನು ನೀವು ಪಾವತಿಸಬೇಕು.

9.2 ಯಾವುದೇ ಕಾರಣಕ್ಕೆ ನಿಮ್ಮ ನಿಯತಕಾಲಿಕ ಲೆಕ್ಕಪಟ್ಟಿಯನ್ನು ನೀವು ಪಡೆಯದೇ ಇದ್ದರೂ ನಮ್ಮ ಪಾಲಿನ ನಿಮ್ಮ ಹೊಣೆಗಾರಿಕೆಯು ಜೀವಂತವಾಗಿರುತ್ತದೆ.

ಕನಿಷ್ಠ ಪಾವತಿಯ ಲೆಕ್ಕಾಚಾರ

9.3 ನಮ್ಮ ಸಾಮಾನ್ಯ ಅಭ್ಯಾಸಕ್ಕೆ ಅನುಗುಣವಾಗಿ ಕನಿಷ್ಠ ಪಾವತಿಯನ್ನು ನಾವು ಲೆಕ್ಕ ಹಾಕುತ್ತೇವೆ. ಹೆಚ್ಚಿನ ಮಾಹಿತಿಗಾಗಿ ದಯವಿಟ್ಟು ನಿಮ್ಮ ಲೆಕ್ಕಪಟ್ಟಿಯನ್ನು ನೋಡಿ ಅಥವಾ ನಮ್ಮನ್ನು ಸಂಪರ್ಕಿಸಿ.

ವಹಿವಾಟಿನ ಕರೆನ್ಸಿ

9.4 ಷರತ್ತು 10.1 ಕ್ಕೆ ಒಳಪಟ್ಟು, ಒಂದು ಕ್ರೆಡಿಟ್ ಕಾರ್ಡನ್ನು ಬಳಸಿ ಮಾಡಿದ ಯಾವುದೇ ವಹಿವಾಟು ಭಾರತೀಯ ರೂಪಾಯಿಗಳಲ್ಲಿ ಇಲ್ಲದೆ ಇದ್ದರೆ, ನಮ್ಮ ಸಾಮಾನ್ಯ ಅಭ್ಯಾಸ ಮತ್ತು ನಮ್ಮ ಬ್ಯಾಂಕಿಂಗ್ ಒಪ್ಪಂದಕ್ಕೆ ಅನುಗುಣವಾಗಿ ವಹಿವಾಟಿನ ಮೊತ್ತವನ್ನು ನಾವು ಭಾರತೀಯ ರೂಪಾಯಿಗಳಿಗೆ ಪರಿವರ್ತಿಸುತ್ತೇವೆ.

ಪಾವತಿಗಳನ್ನು ಅನ್ವಯಿಸುವುದು ಹೇಗೆ

9.5 ನಾವು ಪಾವತಿಸುವುದಕ್ಕಾಗಿ ಪಡೆಯುವ ಪಾವತಿಗಳನ್ನು ಹೀಗೆ ಅನ್ವಯಿಸಬಹುದು (ಆದರೆ ಅನಿವಾರ್ಯವಲ್ಲ):

- ಯಾವುದೇ ಲೆಕ್ಕಪಟ್ಟಿಯಲ್ಲಿ ತೋರಿಸಲಾಗುವ ಶುಲ್ಕಗಳು, ವೆಚ್ಚಗಳು ಮತ್ತು ಬಡ್ಡಿ; ಹಾಗೂ
- ಲೆಕ್ಕಪಟ್ಟಿಯಲ್ಲಿ ತೋರಿಸಲಾದ ಯಾವುದೇ ನಗದು ಮೊತ್ತ; ಮತ್ತು
- ಲೆಕ್ಕಪಟ್ಟಿಯಲ್ಲಿ ತೋರಿಸಲಾದ ಯಾವುದೇ ಇತರ ಮೊತ್ತ; ಮತ್ತು
- ಲೆಕ್ಕಪಟ್ಟಿಯಲ್ಲಿ ತೋರಿಸದ ಯಾವುದೇ ನಗದು ವಹಿವಾಟು ; ಮತ್ತು
- ಲೆಕ್ಕಪಟ್ಟಿಯಲ್ಲಿ ತೋರಿಸದ, ಖಾತೆಯಲ್ಲಿ ಮಾಡಿದ ಇತರ ವಹಿವಾಟುಗಳು.

ನೀವು ಪಾವತಿಸದಿದ್ದರೆ ಏನಾಗುತ್ತದೆ

9.6 ಬಾಕಿ ಪಾವತಿಯ ದಿನಾಂಕದಂದು ಅಥವಾ ಮೊದಲು ಕ್ರೆಡಿಟ್ ಕಾರ್ಡಿನ ಖಾತೆಗೆ ಬಾಕಿ ಇರುವ ಮೊತ್ತವನ್ನು ನಾವು ಸ್ವೀಕರಿಸದೆ ಇದ್ದರೆ, ದರ ಪಟ್ಟಿಯಲ್ಲಿ ಅಥವಾ ನಮ್ಮ ಬ್ಯಾಂಕಿಂಗ್ ಒಪ್ಪಂದದಲ್ಲಿ ಬೇರೆಲ್ಲಾದರೂ ಸೂಚಿಸಿರುವಂತೆ, ಕ್ರೆಡಿಟ್ ಕಾರ್ಡ್ ಫೈನಾನ್ಸ್ ವೆಚ್ಚಗಳ ಖಾತೆಗೆ ನಾವು ವಿಧಿಸಬಹುದು ಮತ್ತು ಆದರಿಂದ ಡೆಬಿಟ್ ಮಾಡಬಹುದು.

9.7 ಒಂದು ವೇಳೆ ನಾವು ಬಾಕಿ ಪಾವತಿ ದಿನಾಂಕದಂದು ಅಥವಾ ಮೊದಲು ಕನಿಷ್ಠ ಪಾವತಿಯನ್ನು ಪಡೆಯದೆ ಇದ್ದರೆ:

- ದರ ಪಟ್ಟಿಯಲ್ಲಿ ಅಥವಾ ನಮ್ಮ ಬ್ಯಾಂಕಿಂಗ್ ಒಪ್ಪಂದದಲ್ಲಿ ಬೇರೆಲ್ಲಾದರೂ ಸೂಚಿಸಿರುವಂತೆ ನೀವು ವಿಳಂಬ ಪಾವತಿ ವೆಚ್ಚವನ್ನು ಪಾವತಿಸಬೇಕು;
- ಕನಿಷ್ಠ ಪಾವತಿಯನ್ನು ಪಾವತಿಸುವ ತನಕ ನೀವು ಕ್ರೆಡಿಟ್ ಕಾರ್ಡನ್ನು ಬಳಸಬಾರದು;
- ಕ್ರೆಡಿಟ್ ಕಾರ್ಡಿನ ನಿಮ್ಮ ಬಳಕೆಯನ್ನು ನಾವು ಅಮಾನತು ಮಾಡಬಹುದು.

ಒಂದು ವೇಳೆ ನಾವು ಕೇಳಿದರೆ ಪೂರ್ಣ ಪಾವತಿ

9.8 ನಮ್ಮ ಬ್ಯಾಂಕಿಂಗ್ ಒಪ್ಪಂದದ ಇತರ ಯಾವುದೇ ನಿಯಮದ ಹೊರತಾಗಿಯೂ, ಲೆಕ್ಕಪಟ್ಟಿಯಲ್ಲಿ ಈಗಾಗಲೇ ಪ್ರತಿಫಲನಗೊಂಡರೂ ಅಥವಾ ಪ್ರತಿಫಲನಗೊಳ್ಳದೆ ಇದ್ದರೂ ಮತ್ತು ಬೇಡಿಕೆಯ ದಿನಾಂಕದಂದು ಬಾಕಿ ಹಾಗೂ ಪಾವತಿಯೋಗ್ಯ ಆಗಿದ್ದರೂ ಅಥವಾ ಆಗದೇ ಇದ್ದರೂ, ನಮಗೆ ಬಾಕಿ ಇರುವ ಯಾವುದೇ ಮೊತ್ತಗಳನ್ನು ತಕ್ಷಣ ಪಾವತಿಗಾಗಿ ಯಾವುದೇ ಸಂದರ್ಭದಲ್ಲಿ ನಾವು ಕೇಳಬಹುದು.

9.9 ಬಡ್ಡಿಯು ಷರತ್ತು 9.8 ರಲ್ಲಿ ಉಲ್ಲೇಖಿಸಿದ ಮೊತ್ತಕ್ಕೆ ಪಾವತಿಯೋಗ್ಯವಾಗುತ್ತದೆ ಹಾಗೂ ನಿಮ್ಮ ಖಾತೆಯಲ್ಲಿನ ಮುಂಗಡ ನಗದಿನ ಮೇಲೆ ಬಡ್ಡಿಯನ್ನು ಲೆಕ್ಕ ಹಾಕಿದಂತೆಯೇ ಹಾಗೂ ನಮ್ಮ ಬೇಡಿಕೆಯ ದಿನಾಂಕದಂದು ಪ್ರಾರಂಭಗೊಂಡು ಸಂಪೂರ್ಣ ಪಾವತಿಯ ದಿನಾಂಕದಂದು ಕೊನೆಯಾಗುವಂತೆ, ಅದು ಪ್ರತಿ ದಿನ ಸಂಚಿತಗೊಳ್ಳುವ ಆಧಾರದಲ್ಲಿ ಲೆಕ್ಕ ಹಾಕಲಾಗುತ್ತದೆ.

ಕ್ರೆಡಿಟ್ ಕಾರ್ಡ್ ಖಾತೆಗೆ ಮರುಪಾವತಿಗಳು

9,10 ಈ ಕೆಳಗಿನವುಗಳಿಗೆ ಸಂಬಂಧಿಸಿದಂತೆ ಮಾತ್ರವೇ ಕ್ರೆಡಿಟ್ ಕಾರ್ಡಿನ ಖಾತೆಗೆ ಮರುಪಾವತಿಯನ್ನು ನಾವು ಮಾಡುತ್ತೇವೆ:

- ಕ್ರೆಡಿಟ್ ಕಾರ್ಡಿನಿಂದ ಮಾಡಿದ ವಹಿವಾಟು; ಅಥವಾ
- ಕ್ರೆಡಿಟ್ ಕಾರ್ಡಿನ ಖಾತೆಗೆ ಮಾಡಿದ ಪಾವತಿ; ಅಥವಾ
- ನಿಮಗೆ ಬಾಕಿ ಇರುವ ಇತರ ಯಾವುದೇ ಸಾಲ,

ಭಾರತದಲ್ಲಿ ಪಾವತಿಯಾಗಬೇಕಾದ ಮೊತ್ತವನ್ನು ನಾವು ಸ್ವೀಕರಿಸಿದಾಗ ಹಾಗೂ ನಮ್ಮ ಸಾಮಾನ್ಯ ಅಭ್ಯಾಸಕ್ಕೆ ಅನುಗುಣವಾಗಿ.

ಲೆಕ್ಕಪಟ್ಟಿ

9.11 ನಿಮ್ಮ ಲೆಕ್ಕಪಟ್ಟಿಯಲ್ಲಿ ದೋಷವಿದೆ ಎಂದು ನೀವು ಭಾವಿಸಿದಲ್ಲಿ, ಲೆಕ್ಕಪಟ್ಟಿಯ ದಿನಾಂಕದ ನಂತರ 21 ದಿನಗಳೊಳಗೆ, ದೋಷದ ವಿವರಗಳೊಂದಿಗೆ ನೀವು ನಮಗೆ ಲಿಖಿತವಾಗಿ ತಿಳಿಸಬೇಕು. ಒಂದು ವೇಳೆ ನೀವು ಈ ರೀತಿ ಮಾಡದೆ ಇದ್ದಲ್ಲಿ, ಲೆಕ್ಕಪಟ್ಟಿಯು ಸರಿ ಇದೆ ಎಂದು ನಾವು ಪರಿಗಣಿಸುತ್ತೇವೆ.

9.12 ಈ ಕೆಳಗಿನ ಸಂದರ್ಭಗಳಲ್ಲಿ ನಾವು ಲೆಕ್ಕಪಟ್ಟಿಯನ್ನು ನೀಡಬೇಕಾದ ಅಗತ್ಯವಿರುವುದಿಲ್ಲ:

- ಹಿಂದಿನ ಲೆಕ್ಕಪಟ್ಟಿಯ ನಂತರ ನಿಮ್ಮ ಕ್ರೆಡಿಟ್ ಕಾರ್ಡಿನ ಖಾತೆಯಲ್ಲಿ ಯಾವುದೇ ವಹಿವಾಟು ದಾಖಲಾಗಿಲ್ಲದೆ ಇದ್ದಲ್ಲಿ; ಮತ್ತು
- ಚಾಲ್ತಿ ಲೆಕ್ಕಪಟ್ಟಿಯ ದಿನಾಂಕದಂದು ನಿಮ್ಮ ಕ್ರೆಡಿಟ್ ಕಾರ್ಡಿನ ಖಾತೆಯು ರೂಪಾಯಿ 250 ಕ್ಕಿಂತ ಕಡಿಮೆ ಕ್ರೆಡಿಟ್ ಮೊತ್ತ ಅಥವಾ ರೂಪಾಯಿ 100 ಕ್ಕಿಂತ ಕಡಿಮೆ ಡೆಬಿಟ್ ಮೊತ್ತ ಹೊಂದಿದ್ದಲ್ಲಿ.

10 ವಿದೇಶಿ ವಹಿವಾಟುಗಳು

10.1 ನೀವು ಕ್ರೆಡಿಟ್ ಕಾರ್ಡನ್ನು ನೇಪಾಳ ಅಥವಾ ಭೂತಾನ್ ನಲ್ಲಿ ಬಳಸಿದರೆ, ಸ್ಥಳೀಯ ಕರೆನ್ಸಿಗಳಲ್ಲಿ ಅಥವಾ ಭಾರತೀಯ ರೂಪಾಯಿಗಳಲ್ಲಿ ಸೂಚಿಸಲಾದ ವಹಿವಾಟುಗಳಿಗಾಗಿ ಮಾತ್ರವೇ ಕ್ರೆಡಿಟ್ ಕಾರ್ಡನ್ನು ನೀವು ಬಳಸಿಕೊಳ್ಳಬಹುದೇ ಹೊರತು ಯಾವುದೇ ವಿದೇಶಿ ಕರೆನ್ಸಿಯಲ್ಲಿ ಅಲ್ಲ.

10.2 ಒಂದು ವೇಳೆ ನೀವು ಕ್ರೆಡಿಟ್ ಕಾರ್ಡನ್ನು ವಿದೇಶದಲ್ಲಿ ಬಳಸಿದರೆ ಹಾಗೂ ನಿಮ್ಮ ವಿದೇಶಿ ವಿನಿಮಯ ಮಿತಿಯ ಅರ್ಹತೆಯನ್ನು ದಾಟಿದರೆ, ಕ್ಲೇಮು ಮಾಡಿದ ಮೊತ್ತವನ್ನು ನೀವು ಮರುಪಾವತಿ ಮಾಡಬೇಕು. ಇದನ್ನು ನಾವು ವಿನಿಮಯ ನಿಯಂತ್ರಣ ಇಲಾಖೆಗೆ ವರದಿ ಮಾಡಬಹುದು.

10.3 ಸಂಬಂಧಿತ ನಿಯಂತ್ರಣ ಪ್ರಾಧಿಕಾರಗಳು ವಿಧಿಸುವ ಆರ್ಥಿಕ ನಿರ್ಬಂಧಗಳನ್ನು ಅನುಸರಿಸಲು ಸ್ಟ್ಯಾಂಡರ್ಡ್ ಚಾರ್ಟರ್ಡ್ ಬದ್ಧವಾಗಿದೆ. ಅಂತಹ ಸಂದರ್ಭಗಳಲ್ಲಿ, ಅಂತಹ ನಿರ್ಬಂಧಗಳಿಗೆ ಒಳಪಟ್ಟಿರುವ ದೇಶಗಳಲ್ಲಿ ನೇರವಾಗಿ ಅಥವಾ ಪರೋಕ್ಷವಾಗಿ ನಮ್ಮ ಉತ್ಪನ್ನಗಳು ಮತ್ತು ಸೇವೆಗಳನ್ನು ಬಳಸಲು ನಾವು ಅನುಮತಿ ನೀಡುವುದಿಲ್ಲ ಮತ್ತು ಈ ದೇಶಗಳನ್ನು ಒಳಗೊಂಡಿರುವ ವಹಿವಾಟುಗಳನ್ನು ಪ್ರಕ್ರಿಯೆಗೊಳಿಸುವುದಿಲ್ಲ.

ಒಂದು ವೇಳೆ ನೀವು ಈ ದೇಶಗಳಲ್ಲಿ ಇದ್ದರೆ, ಫೋನ್ ಬ್ಯಾಂಕಿಂಗ್, ಫ್ಯಾಸಿಮೈಲ್ ಟ್ರಾನ್ಸ್‌ಮಿಶನ್, ಅಥವಾ ಇಮೇಲ್ ಗಳು, ಅಥವಾ ನಮ್ಮ ವೆಬ್ ಸೈಟ್ ಮತ್ತು ಆನ್ಲೈನ್ ಬ್ಯಾಂಕಿಂಗ್ ಗೆ ಆಕ್ಸೆಸ್ ಮಾಡಲು ನಿಮಗೆ ಸಾಧ್ಯವಾಗದು ಹಾಗೂ ನಿಮಗೆ ಹಣಕಾಸಿನ ಯಾವುದೇ ಸೇವೆಗಳನ್ನು ಒದಗಿಸಲು ನಮಗೆ ಸಾಧ್ಯವಾಗದು ಎಂಬುದನ್ನು ದಯವಿಟ್ಟು ಗಮನಿಸಿ. ಈ ದೇಶಗಳನ್ನು ಒಳಗೊಂಡಿರುವ ಪಾವತಿ ಅಥವಾ ವ್ಯಾಪಾರ ವಹಿವಾಟನ್ನು ನಾವು ಪ್ರಕ್ರಿಯೆಗೊಳಿಸುವುದಿಲ್ಲ. ಆರ್ಥಿಕ ನಿರ್ಬಂಧಗಳಿಗೆ ಒಳಪಟ್ಟಿರುವ ದೇಶಗಳ ಪ್ರಸ್ತುತ ಪಟ್ಟಿಗಾಗಿ ದಯವಿಟ್ಟು ನಮ್ಮ ವೆಬ್ ಸೈಟ್ **https://www.sc.com** ಅನ್ನು ನೋಡಿ.

11 ರದ್ದತಿ ಮತ್ತು ಮುಕ್ತಾಯ

ಮುಕ್ತಾಯಗೊಳಿಸುವುದು ಹೇಗೆ

11.1 ಯಾವುದೇ ಸಂದರ್ಭದಲ್ಲಿ ನಾವು ಈ ಕೆಳಗಿನವುಗಳನ್ನು ಆಯ್ಕೆ ಮಾಡಬಹುದು:

- ಕ್ರೆಡಿಟ್ ಕಾರ್ಡು ಬಳಸುವ ನಿಮ್ಮ ಹಕ್ಕನ್ನು ರದ್ದುಪಡಿಸುವುದು ಅಥವಾ ಅಮಾನತು ಮಾಡುವುದು ಅಥವಾ ಕ್ರೆಡಿಟ್ ಕಾರ್ಡಿಗೆ ಖಾತೆಯನ್ನು ಮುಕ್ತಾಯಗೊಳಿಸುವುದು;
- ನೀವು ಕ್ರೆಡಿಟ್ ಕಾರ್ಡನ್ನು ಬಳಸಲು ಇಚ್ಛಿಸುವ ಯಾವುದೇ ವಹಿವಾಟಿಗೆ ಅನುಜ್ಞೆಯನ್ನು ನಿರಾಕರಿಸುವುದು; ಮತ್ತು
- ಕ್ರೆಡಿಟ್ ಕಾರ್ಡಿನ ಮರುವಿತರಣೆ, ನವೀಕರಣ ಅಥವಾ ಬದಲಾವಣೆಯನ್ನು ತಿರಸ್ಕರಿಸುವುದು.

ಹೀಗೆ ಮಾಡಲು ನಾವು ನಿಮಗೆ ಮುಂಚಿತವಾಗಿ ಯಾವುದೇ ನೋಟೀಸು ಅಥವಾ ಕಾರಣವನ್ನು ನೀಡುವ ಅಗತ್ಯವಿಲ್ಲ. ಆದರೂ, ನಾವು ತೆಗೆದುಕೊಳ್ಳುವ ಯಾವುದೇ ಕ್ರಮದ ಕುರಿತು ನಿಮಗೆ ತಿಳಿಸುತ್ತೇವೆ

11.2 ನಮಗೆ ಲಿಖಿತವಾಗಿ ತಿಳಿಸುವ ಮೂಲಕ ಯಾವುದೇ ಸಂದರ್ಭದಲ್ಲಿ ಕ್ರೆಡಿಟ್ ಕಾರ್ಡಿನ ಖಾತೆಯನ್ನು ನೀವು ಮುಕ್ತಾಯಗೊಳಿಸಬಹುದು.

ಖಾತೆಯನ್ನು ಮುಕ್ತಾಯಗೊಳಿಸಿದರೆ ಏನಾಗುತ್ತದೆ

11.3 ಒಂದು ವೇಳೆ ನೀವು ಅಥವಾ ನಾವು ಕ್ರೆಡಿಟ್ ಕಾರ್ಡಿನ ಖಾತೆಯನ್ನು ಮುಕ್ತಾಯಗೊಳಿಸಿದರೆ:

- ನೀವು ಮತ್ತು ಪೂರಕ ಕಾರ್ಡುದಾರರು ಕ್ರೆಡಿಟ್ ಕಾರ್ಡ್ (ಯಾವುದೇ ಪೂರಕ ಕಾರ್ಡು ಸೇರಿದಂತೆ) ಅಥವಾ ಕ್ರೆಡಿಟ್ ಕಾರ್ಡಿಗೆ ಸಂಬಂಧಿಸಿದಂತೆ (ಯಾವುದೇ ಪೂರಕ ಕಾರ್ಡು ಸೇರಿದಂತೆ) ಯಾವುದೇ ಸವಲತ್ತುಗಳನ್ನು ಬಳಸಬಾರದು ಮತ್ತು ಬಳಸಲು ಅರ್ಹರಲ್ಲ;

- ಮ್ಯಾಗ್ನೆಟಿಕ್ ಸ್ಟ್ರಿಪ್ ಮತ್ತು ಹೋಲೋಗ್ರಾಂ ಸರಿಯಾಗಿ ಇಲ್ಲದಿರುವಂತೆ ನೀವು ಮತ್ತು ಯಾವುದೇ ಪೂರಕ ಕಾರ್ಡುದಾರರು ಕ್ರೆಡಿಟ್ ಕಾರ್ಡನ್ನು (ಪ್ರತಿ ಪೂರಕ ಕಾರ್ಡು ಸೇರಿದಂತೆ) ಅರ್ಧಕ್ಕೆ ಕತ್ತರಿಸಬೇಕು; ಮತ್ತು
- ಕ್ರೆಡಿಟ್ ಕಾರ್ಡಿನ ಖಾತೆಗೆ ಬರಬೇಕಿರುವ ಮೊತ್ತ ಸೇರಿದಂತೆ ಕ್ರೆಡಿಟ್ ಕಾರ್ಡಿಗೆ (ಯಾವುದೇ ಪೂರಕ ಕಾರ್ಡು ಸೇರಿದಂತೆ) ಸಂಬಂಧಿಸಿದಂತೆ ನಮಗೆ ಬರಬೇಕಾದ ಎಲ್ಲಾ ಮೊತ್ತಗಳನ್ನು ನೀವು ನಿಮಗೆ ತಕ್ಷಣವೇ ಪಾವತಿಸಬೇಕು.
- ಬಡ್ಡಿಯು ಅಂತಹ ಮೊತ್ತಕ್ಕೆ ಪಾವತಿಯೋಗ್ಯವಾಗುತ್ತದೆ ಹಾಗೂ ನಿಮ್ಮ ಖಾತೆಯಲ್ಲಿನ ಮುಂಗಡ ನಗದಿನ ಮೇಲೆ ಬಡ್ಡಿಯನ್ನು ಲೆಕ್ಕ ಹಾಕಿದಂತೆಯೇ ಹಾಗೂ ಕ್ರೆಡಿಟ್ ಕಾರ್ಡಿನ ಖಾತೆಯನ್ನು ನಾವು ಮುಗಿಸಿದ ದಿನಾಂಕದಂದು ಪ್ರಾರಂಭಗೊಂಡು ಸಂಪೂರ್ಣ ಪಾವತಿಯ ದಿನಾಂಕದಂದು ಕೊನೆಯಾಗುವಂತೆ, ಅದು ಪ್ರತಿ ದಿನ ಸಂಚಿತಗೊಳ್ಳುವ ಆಧಾರದಲ್ಲಿ ಲೆಕ್ಕ ಹಾಕಲಾಗುತ್ತದೆ.

ಕಾರ್ಡುದಾರರು ಪೂರಕ ಕಾರ್ಡನ್ನು ಬಳಸುವುದನ್ನು ಮುಕ್ತಾಯಗೊಳಿಸುವುದು

11.4 ಈ ಕೆಳಗಿನಂತೆ ನೀವು ಅಥವಾ ಪೂರಕ ಕಾರ್ಡುದಾರರು ಪೂರಕ ಕಾರ್ಡಿನ ಬಳಕೆಯನ್ನು ಮುಕ್ತಾಯಗೊಳಿಸಬಹುದು:

- ನಮಗೆ ಲಿಖಿತವಾಗಿ ತಿಳಿಸುವ ಮೂಲಕ; ಮತ್ತು
- ಮ್ಯಾಗ್ನೆಟಿಕ್ ಸ್ಟ್ರಿಪ್ ಮತ್ತು ಹೋಲೋಗ್ರಾಂ ಸರಿಯಾಗಿ ಇಲ್ಲದಿರುವಂತೆ ಪೂರಕ ಕಾರ್ಡನ್ನು ಅರ್ಧಕ್ಕೆ ಕತ್ತರಿಸುವ ಮೂಲಕ ಮತ್ತು ಪೂರಕ ಕಾರ್ಡನ್ನು ನಮಗೆ ಮರಳಿಸುವ ಮೂಲಕ.
- ಕ್ರೆಡಿಟ್ ಕಾರ್ಡಿನ ಮರುವಿತರಣೆ, ನವೀಕರಣ ಅಥವಾ ಬದಲಾವಣೆಯನ್ನು ತಿರಸ್ಕರಿಸುವುದು.

ಹೀಗೆ ಮಾಡಲು ನಾವು ನಿಮಗೆ ಮುಂಚಿತವಾಗಿ ಯಾವುದೇ ನೋಟೀಸು ಅಥವಾ ಕಾರಣವನ್ನು ನೀಡುವ ಅಗತ್ಯವಿಲ್ಲ. ಆದರೂ, ನಾವು ತೆಗೆದುಕೊಳ್ಳುವ ಯಾವುದೇ ಕ್ರಮದ ಕುರಿತು ನಿಮಗೆ ತಿಳಿಸುತ್ತೇವೆ

11.5 ಒಂದು ವೇಳೆ ಪೂರಕ ಕಾರ್ಡನ್ನು ನಮಗೆ ಮರಳಿಸದೆ ಇದ್ದರೆ, ಪೂರಕ ಕಾರ್ಡಿನ ಭವಿಷ್ಯದ ಬಳಕೆಯನ್ನು ತಡೆಗಟ್ಟುವುದಕ್ಕಾಗಿ, ಕಳೆದು ಹೋದ ಕಾರ್ಡುಗಳಿಗೆ ಅನ್ವಯವಾಗುವ ನಮ್ಮ ಕಾರ್ಯವಿಧಾನಗಳಿಗೆ ಅನುಗುಣವಾಗಿ ನಾವು ಸೂಕ್ತ ಕ್ರಮವನ್ನು ತೆಗೆದುಕೊಳ್ಳಬಹುದು. ಪೂರಕ ಕಾರ್ಡನ್ನು ಮರಳಿಸುವ ತನಕ ಅಥವಾ ಕಳೆದು ಹೋದ ಕಾರ್ಡುಗಳಿಗೆ ಅನ್ವಯವಾಗುವ ಕಾರ್ಯವಿಧಾನಗಳನ್ನು ಜಾರಿಗೊಳಿಸಲು ನಮಗೆ ಸಾಧ್ಯವಾಗುವ ತನಕ ಪೂರಕ ಕಾರ್ಡನ್ನು ಬಳಸಿ ಮಾಡಿದ ಯಾವುದೇ ವಹಿವಾಟುಗಳಿಗೆ ನೀವು ಹೊಣೆಗಾರರಾಗುತ್ತೀರಿ. ಇಂತಹ ಕಾರ್ಯವಿಧಾನಗಳನ್ನು ವಿಧಿಸುವುದರಿಂದ ಉಂಟಾಗುವ ಯಾವುದೇ ವೆಚ್ಚಗಳನ್ನು ನಾವು ವಿಧಿಸಬಹುದು.

ಸ್ಥಾಯಿ ಸೂಚನೆಗಳು

11.6 ಒಂದು ವೇಳೆ ನೀವು ಕ್ರೆಡಿಟ್ ಕಾರ್ಡಿನ ಖಾತೆಯನ್ನು ಮುಚ್ಚಿದರೆ, ಕ್ರೆಡಿಟ್ ಕಾರ್ಡ್ ಮೇಲಿನ ಯಾವುದೇ ಸ್ಥಾಯಿ ಸೂಚನೆಗಳನ್ನು ರದ್ದುಪಡಿಸುವುದು ನಿಮ್ಮ ಜವಾಬ್ದಾರಿಯಾಗಿದೆ.

12 ವ್ಯತ್ಯಯ

12.1 ನಮ್ಮ ಬ್ಯಾಂಕಿಂಗ್ ಒಪ್ಪಂದಕ್ಕೆ ನಾವು ಮಾಡುವ ಯಾವುದೇ ಬದಲಾವಣೆಯ ಕುರಿತು ನಿಮಗೆ ತೃಪ್ತಿ ಇಲ್ಲದೆ ಇದ್ದಲ್ಲಿ ಷರತ್ತು 11 ರಲ್ಲಿರುವ ಕಾರ್ಯವಿಧಾನಗಳಿಗೆ ಅನುಗುಣವಾಗಿ ಕ್ರೆಡಿಟ್ ಕಾರ್ಡಿನ ಖಾತೆಯನ್ನು ನೀವು ಮುಕ್ತಾಯಗೊಳಿಸಬಹುದು.

12.2 ಅನ್ವಯವಾಗುವ ಯಾವುದೇ ಕಾನೂನಿಗೆ ಅನುಗುಣವಾಗಿ ನಮ್ಮ ಬ್ಯಾಂಕಿಂಗ್ ಒಪ್ಪಂದಕ್ಕೆ ಮಾಡುವ ಯಾವುದೇ ಬದಲಾವಣೆಗಳನ್ನು ನಾವು ನಿಮಗೆ ತಿಳಿಸಿದರೆ ಹಾಗೂ ಕ್ರೆಡಿಟ್ ಕಾರ್ಡನ್ನು, ಕ್ರೆಡಿಟ್ ಕಾರ್ಡಿನ ಖಾತೆಯನ್ನು ಅಥವಾ ಪಿನ್/ಪಾಸ್ವರ್ಡ್ ಅನ್ನು ನೀವು ಇಟ್ಟುಕೊಂಡಲ್ಲಿ ಅಥವಾ ಬಳಸಿಕೊಂಡಲ್ಲಿ, ನೀವು ಬದಲಾವಣೆಗಳಿಗೆ ಒಪ್ಪಿಕೊಂಡಿದ್ದೀರಿ ಎಂದರ್ಥ.

12.3 ಕ್ರೆಡಿಟ್ ಕಾರ್ಡಿಗೆ ಅರ್ಜಿ ಸಲ್ಲಿಸುವ ವೇಳೆ ಮತ್ತು ಕ್ರೆಡಿಟ್ ಕಾರ್ಡಿನ ನಿಮ್ಮ ಪ್ರತಿ ಬಳಕೆಯ ವೇಳೆ ನೀವು ನಮಗೆ ನೀಡುವ ಮಾಹಿತಿಯನ್ನು ನಾವು ಅವಲಂಬಿಸಿದ್ದೇವೆ. ಇದು ಸರಿ, ಸಂಪೂರ್ಣವಾಗಿರಬೇಕು ಮತ್ತು ತಪ್ಪು ದಾರಿಗೆ ಎಳೆಯುವಂತಿರಬಾರದು. ನೀವು ನಮಗೆ ನೀಡಿರುವ ಯಾವುದೇ ಮಾಹಿತಿಯು ಬದಲಾಗಿದೆ, ತಪ್ಪಾಗಿದೆ ಅಥವಾ ತಪ್ಪು ದಾರಿಗೆ ಎಳೆಯುವಂತಿದೆ ಎಂಬುದು ನಿಮಗೆ ತಿಳಿದರೆ, 30 ಕ್ಯಾಲೆಂಡರ್ ದಿನಗಳೊಳಗೆ ನೀವು ನಮಗೆ ತಿಳಿಸಬೇಕು.

13 ಸಂದೇಹಾಸ್ಪದ ವಹಿವಾಟುಗಳು

13.1 ಸಂದೇಹಾಸ್ಪದ ವಹಿವಾಟುಗಳನ್ನು ನಾವು ಗೌರವಿಸುವ ಅಗತ್ಯವಿಲ್ಲ (ಹಾಗೂ ಒಂದು ವೇಳೆ ಹಾಗೆ ಆಗಿದ್ದಲ್ಲಿ ನಿಮಗೆ ತಿಳಿಸುವ ಅಗತ್ಯವಿಲ್ಲ).

13.2 ಕ್ರೆಡಿಟ್ ಕಾರ್ಡನ್ನು ಸ್ವಾಧೀನಪಡಿಸಿಕೊಳ್ಳುವುದಕ್ಕಾಗಿ ವ್ಯಾಪಾರಿಗಳಿಗೆ ತಿಳಿಸಿ, ಕ್ರೆಡಿಟ್ ಕಾರ್ಡಿಗೆ ಸಂಬಂಧಿಸಿದಂತೆ ಮಾಹಿತಿಯನ್ನು ನಾವು ಎಚ್ಚರಿಕೆಯ ಬುಲೆಟಿನ್ ನಲ್ಲಿ ಪ್ರಕಟಿಸಬಹುದು. ಹೀಗೆ ಮಾಡಲು ನಾವು ನಿಮಗೆ ಕಾರಣವನ್ನು ನೀಡುವ ಅಗತ್ಯವಿಲ್ಲ

13.3 ಸಾಲದ ಅಥವಾ ವಂಚನೆಯ ಯಾವುದೇ ಅಪಾಯವಿದೆ ಎಂದು ನಾವು ಪರಿಗಣಿಸಿದರೆ ಕ್ರೆಡಿಟ್ ಕಾರ್ಡಿನ ಖಾತೆಯನ್ನು ನಾವು ನಿರ್ಬಂಧಿಸಬಹುದು.

13.4 ಪ್ರಾಧಿಕಾರದ ಪ್ರಕಾರ ಹಾಗೆ ಮಾಡಬೇಕಾದಲ್ಲಿ, ಅಥವಾ ಇಲ್ಲದಿದ್ದರೆ ಕಾನೂನಿನ ಪ್ರಕಾರ ಹಾಗೆ ಮಾಡಬೇಕಾದರೆ, ಅಥವಾ ಹೀಗೆ ಮಾಡಲು ಯಾವುದೇ ನಿಯಂತ್ರಕ ಅಥವಾ ಯಾವುದೇ ಪ್ರಾಧಿಕಾರದೊಂದಿಗಿನ ಒಪ್ಪಂದಕ್ಕೆ ಅನುಗುಣವಾಗಿ ಅಥವಾ ಪ್ರಾಧಿಕಾರದ ಅನ್ವಯ ಆದೇಶ ಅಥವಾ ನಿರ್ಬಂಧಕ್ಕೆ ಸಂಬಂಧಿಸಿದ ಆಂತರಿಕ ನೀತಿಗಳಿಗೆ ಅನುಗುಣವಾಗಿ ನಾವು ಹಾಗೆ ಮಾಡಬೇಕಾದರೆ, ಯಾವುದೇ ಸಂದರ್ಭದಲ್ಲಿ ನಿಮ್ಮ ಕ್ರೆಡಿಟ್ ಕಾರ್ಡಿನ ಖಾತೆಯನ್ನು ನಾವು ನಿರ್ಬಂಧಿಸಬಹುದು (ಮತ್ತು ನಂತರ ನಿರ್ಬಂಧವನ್ನು ತೆರವುಗೊಳಿಸಬಹುದು).

13.5 ಅನ್ವಯವಾಗುವ ಸ್ಥಳೀಯ ನಿಯಮಗಳಿಗೆ ಒಳಪಟ್ಟು, ನಿಯಂತ್ರಕರ ಅಥವಾ ಅಧಿಕಾರಿಗಳ ಅಥವಾ ಇಲ್ಲದಿದ್ದರೆ ಆದೇಶಗಳು, ಒಪ್ಪಂದಗಳಿಗೆ ಸಂಬಂಧಿಸಿದಂತೆ ಯಾವುದೇ ನ್ಯಾಯವ್ಯಾಪ್ತಿಯಲ್ಲಿ ನಿಮ್ಮ ತೆರಿಗೆ ಹೊಣೆಗಾರಿಕೆಯನ್ನು ಸಾಬೀತುಪಡಿಸಲು ಅಗತ್ಯವಿರುವಲ್ಲಿ, ದೇಶೀಯ ಅಥವಾ ವಿದೇಶಿ ನಿಯಂತ್ರಕರು ಅಥವಾ ತೆರಿಗೆ ಅಧಿಕಾರಿಗಳೊಂದಿಗೆ ನಿಮ್ಮ ಮಾಹಿತಿಯನ್ನು ಹಂಚಿಕೊಳ್ಳಲು, ನೀವು ಈ ಮೂಲಕ ಸ್ಟಾಂಡರ್ಡ್ ಚಾರ್ಟರ್ಡ್ ಬ್ಯಾಂಕು ಅಥವಾ ಇದರ ಯಾವುದೇ ಅಂಗಸಂಸ್ಥೆಗಳಿಗೆ (ಶಾಖೆಗಳು ಸೇರಿದಂತೆ) (ಒಟ್ಟಿಗೆ ''ಬ್ಯಾಂಕು'') ನೀವು ಈ ಮೂಲಕ ಸಮ್ಮತಿ ನೀಡುತ್ತೀರಿ.

14 ಕಾರ್ಡುಗಳ ನವೀಕರಣ ಮತ್ತು ಬದಲಾವಣೆ

ನೀವು ಕ್ರೆಡಿಟ್ ಕಾರ್ಡಿನ ಖಾತೆಯನ್ನು ಮುಚ್ಚುವ ತನಕ ಕ್ರೆಡಿಟ್ ಕಾರ್ಡಿನ ನವೀಕರಣ ಮತ್ತು ಬದಲಾವಣೆಗಾಗಿ ಸ್ಥಾಯೀ ವಿನಂತಿಯನ್ನು ಮಾಡಿದ್ದೀರಿ ಎಂಬುದನ್ನು ನೀವು ಒಪ್ಪಿಕೊಳ್ಳುತ್ತೀರಿ. ಆದರೂ, ಕ್ರೆಡಿಟ್ ಕಾರ್ಡನ್ನು ನವೀಕರಿಸುವ ಅಥವಾ ಬದಲಾಯಿಸುವ ಯಾವುದೇ ನಿರ್ಧಾರವು ನಮ್ಮ ವಿವೇಚನೆಗೆ ಬಿಟ್ಟದ್ದು.

15 ನೀವು ವಿದೇಶಿ ಪ್ರಜೆಯಾಗಿದ್ದರೆ

ಒಂದು ವೇಳೆ ವಿದೇಶಿ ಪ್ರಜೆಯಾಗಿದ್ದು ಭಾರತವನ್ನು ಶಾಶ್ವತವಾಗಿ ತೊರೆಯುವುದಾದರೆ ನೀವು:

- ನೀವು ಹೀಗೆ ಮಾಡುವ ಮೊದಲು ನಮಗೆ ನೋಟೀಸ್ ನೀಡಬೇಕು;
- ಕ್ರೆಡಿಟ್ ಕಾರ್ಡಿನ ನಿಮ್ಮ ಎಲ್ಲಾ ಖಾತೆಗಳಿಗೆ ಬಾಕಿ ಇರುವ ಮೊತ್ತದ ಮರುಪಾವತಿ ಮಾಡಬೇಕು; ಮತ್ತು
- ಕ್ರೆಡಿಟ್ ಕಾರ್ಡಿನ ಪ್ರತಿ ಖಾತೆಯನ್ನು ಮುಕ್ತಾಯಗೊಳಿಸಬೇಕು. (ಅಲ್ಲದೆ ಷರತ್ತು 11.3 ಅನ್ನು ನೋಡಿ.)

16 ಪದಗಳ ಅರ್ಥ

ನೀವು ಈ ಪದಗಳಲ್ಲಿ ಪ್ರಮುಖ ಪದಗಳನ್ನು ವ್ಯಾಖ್ಯಾನಿಸಿರುವ ಗ್ರಾಹಕ ಪದಗಳನ್ನು ಸಹ ನೋಡಬೇಕು. ಒಂದು ವೇಳೆ ಈ ಪದಗಳಲ್ಲಿ ವ್ಯಾಖ್ಯಾನಿಸಲಾಗಿರುವ ಪದವನ್ನು ನಮ್ಮ ಗ್ರಾಹಕ ಪದಗಳಲ್ಲಿಯೂ ವ್ಯಾಖ್ಯಾನಿಸಿದ್ದರೆ, ಈ ಪದಗಳ ವ್ಯಾಖ್ಯಾನವು ಕ್ರೆಡಿಟ್ ಕಾರ್ಡುಗಳ ಖಾತೆಗಳ ಉದ್ದೇಶಗಳಿಗಾಗಿ ಅನ್ವಯವಾಗುತ್ತದೆ.

ಮೊತ್ತದ ವರ್ಗಾವಣೆ ಎಂದರೆ ನೀವು ಸೂಚಿಸುವ ಮೊತ್ತವನ್ನು ನಿಮ್ಮ ಕ್ರೆಡಿಟ್ ಕಾರ್ಡಿನಿಂದ ನಾವು ಕಡಿತಗೊಳಿಸಿ ಆ ಮೊತ್ತವನ್ನು ಇನ್ನೊಂದು ಹಣಕಾಸು ಸಂಸ್ಥೆಯ ಜೊತೆಗೆ ಇರುವ ಇನ್ನೊಂದು ಕ್ರೆಡಿಟ್ ಕಾರ್ಡಿಗೆ ಪಾವತಿಸುವ ವಹಿವಾಟು ಆಗಿದೆ.

ಮುಂಗಡ ನಗದು ಎಂದರೆ ಕ್ರೆಡಿಟ್ ಕಾರ್ಡನ್ನು ಬಳಸಿ ಪಡೆಯಲಾದ ಹಾಗೂ ಯಾವುದೇ ಕರೆನ್ಸಿಯಲ್ಲಿ ನೀಡಲಾದ ನಗದು.

ಕೊ-ಬ್ರಾಂಡ್ ಕಾರ್ಡು ಎಂದರೆ ವ್ಯವಹಾರ ಮೈತ್ರಿ ಪಾಲುದಾರರ ಸಹಯೋಗದೊಂದಿಗೆ ನೀಡಿದ ಕಾರ್ಡು.

ಕ್ರೆಡಿಟ್ ಕಾರ್ಡಿನ ಖಾತೆಗೆ ಸಾಲ ಮಿತಿ ಎಂದರೆ, ಕ್ರೆಡಿಟ್ ಕಾರ್ಡಿನ ಖಾತೆಗೆ ಬಾಕಿ ಉಳಿಸಲು ನೀವು ಅರ್ಹತೆ ಪಡೆದಿರುವ ಗರಿಷ್ಠ ಮೊತ್ತವಾಗಿದೆ.

ನಮ್ಮ ಬ್ಯಾಂಕಿಂಗ್ ಒಪ್ಪಂದ ಎಂದರೆ, ನಿಮ್ಮಿಂದ ನಾವು ಅರ್ಜಿಯನ್ನು ಸ್ವೀಕರಿಸಿದಾಗ ನಿಮ್ಮ ಮತ್ತು ನಮ್ಮ ನಡುವೆ ರೂಪುಗೊಂಡ ಒಪ್ಪಂದವಾಗಿದ್ದು, ಇದರ ನಿಯಮಗಳು ನಮ್ಮ ಗ್ರಾಹಕ ನಿಯಮಗಳು ಮತ್ತು ಈ ನಿಮಯಗಳನ್ನು ಒಳಗೊಂಡಿವೆ.

ಕ್ರೆಡಿಟ್ ಕಾರ್ಡಿನ ಖಾತೆಗೆ ಪೂರಕ ಕಾರ್ಡು ಎಂದರೆ, ಕ್ರೆಡಿಟ್ ಕಾರ್ಡಿನ ನಿಮ್ಮ ಖಾತೆಗೆ ಪೂರಕ ಕಾರ್ಡುದಾರನಾಗಿ ನೀವು ಅನುಮತಿಸುವ ವ್ಯಕ್ತಿಗೆ ನೀಡುವ ಕ್ರೆಡಿಟ್ ಕಾರ್ಡು.

ಪೂರಕ ಕಾರ್ಡುದಾರ ಎಂದರೆ ನಾವು ಯಾರಿಗೆ ಪೂರಕ ಕಾರ್ಡನ್ನು ನೀಡುತ್ತೇವೆಯೋ ಆ ಪ್ರತಿ ವ್ಯಕ್ತಿ.